ಸಂಪುಟ 01 | ಸಂಚಿಕೆ 199 ಬುಧವಾರ 23 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) International Day of Sign Languages
ಅಂತರರಾಷ್ಟ್ರೀಯ ಸಂಕೇತ ಭಾಷೆಗಳ ದಿನ
ಪ್ರತಿವರ್ಷ ಸೆಪ್ಟೆಂಬರ್ 23ರಂದು ಆಚರಿಸಲಾಗುತ್ತದೆ. ಕಿವುಡರ ಮಾನವ ಹಕ್ಕುಗಳು ಮತ್ತು ಸಂಕೇತ ಭಾಷೆಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಇದರ ಉದ್ದೇಶ.

2) International Celebrate Bisexuality Day ?
ಅಂತರರಾಷ್ಟ್ರೀಯ ದ್ವಿಲೈಂಗಿಕತೆ ಜಾಗೃತಿ ದಿನ
ಸೆಪ್ಟೆಂಬರ್ 23ರಂದು ಆಚರಿಸಲಾಗುವ ಜಾಗೃತಿ ದಿನ. ದ್ವಿಲೈಂಗಿಕ ಸಮುದಾಯದ ಇತಿಹಾಸ, ಸಂಸ್ಕೃತಿ ಮತ್ತು ಸಾಮಾಜಿಕ ಅರಿವಿನ ಕುರಿತು ಗಮನ ಸೆಳೆಯುತ್ತದೆ.

ಸುಭಾಷಿತ

ನೀವು ನಿದ್ದೆಯಲ್ಲಿ ಕಾಣುವುದು ಕನಸಲ್ಲ.
ನಿಮ್ಮನ್ನು ನಿದ್ದೆ ಮಾಡಲು ಬಿಡದಿರುವುದೇ
ನಿಜವಾದ ಕನಸು.

-ಎ.ಪಿ.ಜೆ. ಅಬ್ದುಲ್ ಕಲಾಂ

ಕೆಪಿಎಸ್‌ಸಿ ಕರ್ಮಕಾಂಡದಲ್ಲಿ ಮತ್ತೊಂದು ಟ್ವಿಸ್ಟ್ :
ಸಂದರ್ಶನಕ್ಕೂ ಮುನ್ನ ಅಭ್ಯರ್ಥಿಯೊಂದಿಗೆ 13 ಬಾರಿ ಕರೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಅಕ್ರಮದ ಆರೋಪಗಳ ತನಿಖೆ ಮುಂದುವರಿದಿರುವ ಬೆನ್ನಲ್ಲೇ, ಕೆಎಎಸ್ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿ ಹಾಗೂ ಕೆಪಿ-ಎಸ್‌ಸಿ ಸದಸ್ಯೆ ಡಾ. ಶಾಂತಾ ಹೊಸಮನಿ ಅವರ ನಡುವಿನ ದೂರವಾಣಿ ಸಂಪರ್ಕ ತನಿಖೆಯ ಪ್ರಮುಖ ಅಂಶವಾಗಿ ಹೊರಹೊಮಿದೆ.

ಮೇ 8ರಂದು ನಡೆದ ಕೆಎಎಸ್ ಸಂದರ್ಶನಕ್ಕೂ ಮುನ್ನ ಇಬ್ಬರ ನಡುವೆ ಒಟ್ಟು 13 ಬಾರಿ ದೂರವಾಣಿ ಕರೆಗಳು ನಡೆದಿರುವುದು ಸಿಐಡಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಸಿಐಡಿ ಪ್ರಕಾರ, ಅಭ್ಯರ್ಥಿಯ ಕಡೆಯಿಂದ ಹೊಸಮನಿ ಅವ-ರಿಗೆ ಎಂಟು ಕರೆಗಳು ಹಾಗೂ ಹೊಸಮನಿ ಅವರ ಕಡೆಯಿಂದ ಅಭ್ಯರ್ಥಿಗೆ ಐದು ಕರೆಗಳು ನಡೆದಿವೆ. ಈ ಪೈಕಿ ಕೆಲವು ಕರೆಗಳು ಸಂದರ್ಶನಕ್ಕೂ ಆರು ದಿನಗಳ ಮುನ್ನವೇ ನಡೆದಿದ್ದವು ಎನ್ನಲಾಗಿದೆ.

ಆದರೆ, ಕರೆಗಳ ಸಂದರ್ಭದಲ್ಲಿ ನಿಖರವಾಗಿ ಏನು ಚರ್ಚಿಸಲಾಗಿ-ತ್ತು ಎಂಬುದು ಇನ್ನೂ ತನಿಖೆಯಿಂದ ಅಂತಿಮವಾಗಿ ದೃಢಪಟ್ಟಿಲ್ಲ. ವಿಚಾರಣೆ ವೇಳೆ ಅಭ್ಯರ್ಥಿಯು, ಹೊಸಮನಿ ಅವರನ್ನು ವೈದ್ಯೆ ಎಂಬ ಪರಿಚಯದ ಹಿನ್ನೆಲೆಯಲ್ಲಿ ಸಲಹೆ ಪಡೆಯಲು ಸಂಪರ್ಕಿಸಿದ್ದಾಗಿ ಹೇಳಿಕೊಂಡಿದ್ದಾರೆ. ಸಂದರ್ಶನದ ಸಂದರ್ಭದಲ್ಲಿ ಹೊಸಮನಿ ಅವರ ಪರಿಚಯ ಇರಲಿಲ್ಲ ಎಂದೂ ಅವರು ತನಿಖಾಧಿಕಾ-ರಿಗಳ ಮುಂದೆ ತಿಳಿಸಿದ್ದಾರೆ ಎನ್ನಲಾಗಿದೆ.

ಅಭ್ಯರ್ಥಿಯ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ವೇಳೆ ಸಿಐಡಿ



ತನಿಖೆಯ ಈ ಅಂಶಗಳು ನ್ಯಾಯಾಲಯದ ಗಮನಕ್ಕೆ ಬಂದಿವೆ. ಕೆಎಎಸ್ ಸಂದರ್ಶನದಲ್ಲಿ ಅಭ್ಯರ್ಥಿಯನ್ನು ಆಯ್ಕೆ ಮಾಡಿದ ಮಂಡಳಿಯ ಭಾಗವಾಗಿ ಹೊಸಮನಿ ಇದ್ದರು ಎಂಬ ಆರೋಪವೂ ಕೇಳಿಬಂದಿದೆ. ಸೆಪ್ಟೆಂಬರ್ 10ರಂದು ಹೊಸಮನಿ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸೆಷನ್?ಸ ನ್ಯಾಯಾಲಯ ತಿರಸ್ಕರಿಸಿತ್ತು. ಬಳಿಕ ಸೆಪ್ಟೆಂಬರ್ 17ರಂದು ಅವರು ಸಿಐಡಿ ಮುಂದೆ ವಿಚಾರಣೆಗೆ ಹಾಜರಾಗಿದ್ದರು.

ಅಭ್ಯರ್ಥಿಗಳೊಂದಿಗೆ ಸಂಪರ್ಕದ ನಿಯಮ : ಕೆಪಿಎಸ್‌ಸಿ ಸದಸ್ಯರು ಅಭ್ಯರ್ಥಿಗಳೊಂದಿಗೆ ಸಂಪರ್ಕ ಹೊಂದಬಾರದು ಎಂಬ ನಿಯಮಾವಳಿಯನ್ನು ತನಿಖಾ ಸಂಸ್ಥೆ ನ್ಯಾಯಾಲಯದ ಗಮನಕ್ಕೆ ತಂದಿದೆ. ಸದಸ್ಯರು ತಮ ಸಂಬಂಧಿಕರ ಸಂದರ್ಶನ ನಡೆಸಬಾರದು ಹಾಗೂ ಅಭ್ಯರ್ಥಿಗಳೊಂದಿಗೆ ಸಂಪರ್ಕದಲ್ಲಿರಬಾರದು ಎಂಬ ನಿಯಮಗಳಿವೆ ಎಂದು ಸಿಐಡಿ ವಾದಿಸಿದೆ.

ಇದಕ್ಕೆ ಪ್ರತಿಯಾಗಿ ಹೊಸಮನಿ ಪರ ವಕೀಲರು, ಕೆಎಎಸ್‌ಸಂದರ್ಶನ ಮಂಡಳಿಗಳ ರಚನೆ ಹಾಗೂ ಅಭ್ಯರ್ಥಿಗಳನ್ನು ವಿವಿಧ ಮಂಡಳಿಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆಯಲ್ಲಿ ವೈಯಕ್ತಿಕ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ ಎಂದು ವಾದಿಸಿದ್ದಾರೆ.

384 ಕೆಎಎಸ್ ಹುದ್ದೆಗಳ ಅಂತಿಮ ಪಟ್ಟಿಗೆ ತಡೆ : ಈ ಬೆಳವಣಿಗೆ ಮಹತ್ವ ಪಡೆದಿರುವುದು 384 ಕೆಎಎಸ್‌ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಈಗಾಗಲೇ ನ್ಯಾಯಾಂಗ ಪರಿಶೀಲನೆಯಲ್ಲಿರುವ ಹಿನ್ನೆಲೆಯಲ್ಲಿ. 2024ರ ನೇಮಕಾತಿಗೆ ಎರಡು ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆ ಬರೆದಿದ್ದು, ಬಳಿಕ 1,152 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗಿತ್ತು.

ನೇಮಕಾತಿಯಲ್ಲಿ ಅಕ್ರಮದ ಆರೋಪಗಳ ಹಿನ್ನೆಲೆಯಲ್ಲಿ ಕರ್ನಾಟಕ ಹೈಕೋರ್ಟ್ ಜುಲೈ 31ರಂದು 384 ಕೆಎಎಸ್‌ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವುದಕ್ಕೆ ತಡೆ ನೀಡಿತ್ತು. ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಾದ 74 ಹುದ್ದೆಗಳ ಪೈಕಿ ತನಿಖೆ ಎದುರಿಸುತ್ತಿರುವ ಅಭ್ಯರ್ಥಿಯೂ ಒಬ್ಬರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಸಂದರ್ಶನಕ್ಕೂ ಮುನ್ನ ನಡೆದ 13 ದೂರವಾಣಿ ಕರೆಗಳು ಒಬ್ಬ ಕೆಪಿ-ಎಸ್‌ಸಿ ಸದಸ್ಯೆ ಮತ್ತು ಅಭ್ಯರ್ಥಿಯ ನಡುವಿನ ಸಂಪರ್ಕದ ಪ್ರಶ್ನೆಯಷ್ಟೇ ಅಲ್ಲದೆ, ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆ ಬಗ್ಗೆಯೂ ಚರ್ಚೆ ಹುಟ್ಟುಹಾಕಿವೆ. ಆದಾಗ್ಯೂ, ಕರೆಗಳ ದಾಖಲೆಗಳು ಮಾತ್ರ ಲಂಚ ಅಥವಾ ನೇಮಕಾತಿ ಅಕ್ರಮವನ್ನು ಸಾಬೀತುಪಡಿಸುವುದಿಲ್ಲ. ಕರೆಗಳ ವಿಷಯ, ಡಿಜಿಟಲ್ ದಾಖಲೆಗಳು, ಸಂದೇಶಗಳು, ಇ-ಮೇಲ್‌ಗಳು ಹಾಗೂ ಹಣಕಾಸು ವ್ಯವಹಾರ ಸೇರಿದಂತೆ ಇತರ ಸಾಕ್ಷ್ಯಗಳನ್ನು ಸಿಐಡಿ ಪರಿಶೀಲಿಸುತ್ತಿದೆ.

ಪಶುವೈದ್ಯರ ನೇಮಕಾತಿ ಪ್ರಕರಣವೂ ತನಿಖೆಯಲ್ಲಿ : ಇದೇ ವೇಳೆ 400 ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದ ಅಕ್ರಮ ಪ್ರಕರಣವೂ ತನಿಖೆಯಲ್ಲಿದೆ. ಸಿಐಡಿ ಪ್ರಕಾರ, 329 ಅಭ್ಯರ್ಥಿಗಳ ಪೈಕಿ 11 ಮಂದಿ ಮಧ್ಯವರ್ತಿ ಬಸವರಾಜ್ ಕನ್ನಾಳೆ ಅವ-ರಿಗೆ ತಲಾ 35 ಲಕ್ಷದಿಂದ 80 ಲಕ್ಷದವರೆಗೆ ಹಣ ಪಾವತಿಸಿರುವ ಆರೋಪವಿದೆ.

ಹಣಕಾಸು ಅಕ್ರಮದ ಆಯಾಮದಲ್ಲೂ ತನಿಖೆ ಮುಂದುವ-ರಿದಿದ್ದು, ಜಾರಿ ನಿರ್ದೇಶನಾಲಯವೂ ಪ್ರಕರಣ ಕೈಗೆತ್ತಿಕೊಂಡಿದೆ. ಹೀಗಾಗಿ ಕೆಪಿ-ಎಸ್‌ಸಿಗೆ ಸಂಬಂಧಿಸಿದ ವಿವಿಧ ಪ್ರಕರಣಗಳು ಸರ್ಕಾರಿ ನೇಮಕಾತಿ ವ್ಯವಸ್ಥೆಯ ಪಾರದರ್ಶಕತೆ, ಸಮಾನ ಅವಕಾಶ ಮತ್ತು ಸಂಸ್ಥೆಯ ಮೇಲಿನ ಸಾರ್ವಜನಿಕ ವಿಶ್ವಾಸದ ಕುರಿತು ಮತ್ತಷ್ಟು ಗಮನ ಸೆಳೆದಿವೆ.

ಯಾದಗಿರಿ ಜಿಲ್ಲೆ ಸಂಪೂರ್ಣ ಬರಗಾಲ ಘೋಷಣೆ ಮಾಡಿದ್ದಕ್ಕೆ ಜಿಲ್ಲಾ ರೈತ ಸಂಘದಿಂದ ಸಂತೋಷ

❑ ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಜಿಲ್ಲೆಯನ್ನು ಸಂಪೂರ್ಣ ಬರಗಾಲ ಘೋಷಣೆ ಮಾಡಿದ್ದು ಸರಕಾರಕ್ಕೆ ಧನ್ಯವಾದಗಳು ಸಲ್ಲಿಸುತ್ತೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಯಾದಗಿರಿ ಜಿಲ್ಲಾಧ್ಯಕ್ಷರಾದ ಮಲ್ಲನಗೌಡ ಹಗರಟಗಿಯವರು ಹೇಳಿದರು.



ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಆಗಿರುವಂತಹ ಶ್ರೀ ಡಿಕೆ ಶಿವಕುಮಾರ್ ಅವ-ರಿಗೆ ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾಗಿರತಕ್ಕಂತ ಶ್ರೀ ಶರಣ ಪ್ರಕಾಶ್ ಪಾಟೀಲ್ ಅವರಿಗೆ. ಹಾಗೆ ಕೃಷಿ ಸಚಿವರಿಗೆ ಅನಥ ಕೃತಜ್ಞತೆಗಳನ್ನು ನಮ್ಮ ರೈತ ಸಂಘದಿಂದ ಸಲ್ಲಿಸುತ್ತೇವೆ ಎಂದರು. ಮುಂದಿನ ದಿನಮಾನಗಳಲ್ಲಿ ಸರಕಾರ ರೈತರ ಜೊತೆ ಇದ್ದರೆ ನಾವು ಯಾವತ್ತೂ ನಿಮ್ಮ ಜೊತೆ ಇರುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಿದರು. ಇದೇ ಸಂದರ್ಭದಲ್ಲಿ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಪದಾಧಿಕಾರಿಗಳು ಮತ್ತು ರೈತರು ಪಾಲ್ಗೊಂಡಿದ್ದರು.

ಮಕ್ಕಳಿಗೆ ಪೋಷಣೆ, ರಕ್ಷಣೆ ನೀಡಲು ಆಸಕ್ತರಿಂದ ಫಾಸ್ಟರ್ ಕೇರ್‌ಗೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು ಸೆಪ್ಟಂಬರ್ 22 (ಕರ್ನಾಟಕ ವಾರ್ತೆ): ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ವತಿಯಿಂದ 0-18 ವರ್ಷದೊಳಗಿನ ಮಕ್ಕಳ ಪೋಷಣೆ ಮತ್ತು ರಕ್ಷಣೆಗಾಗಿ ಆಸಕ್ತರಿಂದ ಫಾಸ್ಟರ್ ಕೇರ್‌ಗೆ ಅರ್ಜಿ ಆಹ್ವಾನಿಸಲಾಗಿದೆ.

ಫಾಸ್ಟರ್ ಕೇರ್ (ಪೋಷಕತ್ವ) ಎಂದರೆ ಮಕ್ಕಳ ಕಲ್ಯಾಣ ಸಮಿತಿಯು ಮಗುವಿನ ರಕ್ಷಣೆಯನ್ನು ಜೈವಿಕ ಕುಟುಂಬವನ್ನು ಹೊರತುಪಡಿಸಿ, ಮತ್ತೊಂದು ಕೌಟುಂಬಿಕ ವಾತಾವರಣ ಹೊಂದಿರುವ ಪರ್ಯಾಯ ವ್ಯವಸ್ಥೆಯಲ್ಲಿ ಇರಿಸುವುದನ್ನು ಪೋಷಕತ್ವ ಎನ್ನಬಹುದು. ಈ ಪರ್ಯಾಯ ವ್ಯವಸ್ಥೆಯ ಮಕ್ಕಳ ಕಲ್ಯಾಣ ಸಮಿತಿಯಿಂದ ಆಯ್ಕೆ ಮಾಡಿ, ಅರ್ಹತೆ ಹೊಂದಿರುವ, ಅಂಗೀಕಾರ



ಪಡೆದಿರುವ ಹಾಗೂ ಮಕ್ಕಳ ರಕ್ಷಣೆಯನ್ನು ಮೇಲ್ವಿಚಾರಣೆಗೆ ಒಳಪಡುವ ವ್ಯವಸ್ಥೆಯಾಗಿದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಬಾಲನ್ಯಾಯ ಕಾಯ್ದೆ-2015ರ ಸೆಕ್ಷನ್(44)ರನ್ವಯ ಪೋಷಕತ್ವ ಯೋಜನೆಯಲ್ಲಿ ಮಕ್ಕಳನ್ನು ಇರಿಸಲು ಗುರುತಿಸಲ್ಪಟ್ಟ ಕುಟುಂಬ. ಮಕ್ಕಳು ಕುಟುಂಬದ ವಾತವರಣದಲ್ಲಿ ಬೆಳೆಯಲು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ರಾಯಚೂರು ಆದೇಶದ ಮೇರೆಗೆ ಕುಟುಂಬದಲ್ಲಿ ತಾತ್ಕಾಲಿಕವಾಗಿ ಅಥವಾ ವಿಸ್ತರಿಸಲ್ಪಟ್ಟ ಅವಧಿಗೆ ಮಕ್ಕಳನ್ನು ಪೋಷಕತ್ವ ಯೋಜನೆಯಡಿಯಲ್ಲಿ ಫಾಸ್ಟರ್ ಕೇರ್ ನೀಡಬಹುದಾಗಿದೆ. ರಾಯಚೂರು ಜಿಲ್ಲೆಯಲ್ಲಿ ಮಕ್ಕಳಿಲ್ಲದ ದಂಪತಿಗಳು, ಏಕ ಪೋಷಕ ಕುಟುಂಬಸ್ಥರು, ಮಕ್ಕಳಿಗೆ ಪೋಷಣೆ ಮತ್ತು ರಕ್ಷಣೆ ನೀಡಲು ಆಸಕ್ತಿ ಇರುವವರು ಈ ಕಚೇರಿಯ ವಿಳಾಸ: ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮನೆ ಸಂಖ್ಯೆ: 1-9-138, ಪಶ್ಚಿಮ ಪೊಲೀಸ್ ಠಾಣೆ ಹಿಂದೆ, ಮಾರಮ್ಮಗುಡಿ ಎದುರುಗಡೆ, ಗೋಲ್ ಮಾರ್ಕೆಟ್, ಆಜಾದ್ ನಗರ, ರಾಯಚೂರು-584101 ಇಲ್ಲಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ-08532-226226, 8618362385, 9731603295, 8660627793ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾ-ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೇರದಾಳ ಮತಕ್ಷೇತ್ರದ ಶಾಸಕರಿಂದ ಕೃಷ್ಣಾ ನದಿ ತೀರ ಸ್ವಚ್ಛತಾ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ರಬಕವಿ-ಬನಹಟ್ಟಿ: ಪ್ರಧಾನಿ ಮೋದಿ ಜನ್ಮದಿನಾಚರಣೆ ಪ್ರಯುಕ್ತ ಸೇವಾ ಸಂಕಲ್ಪ ಅಭಿಯಾನದ ಅಂಗವಾಗಿ ಭಾನುವಾರ ರಬಕವಿ-ಬನಹಟ್ಟಿ ಸಮೀಪದ ಕೃಷ್ಣಾ ನದಿ ತೀರದಲ್ಲಿ ಶಾಸಕ ಸಿದ್ದು ಸವದಿ ಅವರ ನೇತೃತ್ವದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಸದಾಶಿವ ಪೂಜಾರಿ ಪಾಂಡು ಯರಕನ್ನವರ, ಶ್ರೀಶೈಲ ಬೀಳಗಿ, ಸುರೇಶ ಅಕ್ಕಿವಾಟ, ಧರೆಪ್ಪ ಉಳ್ಳಾಗಡ್ಡಿ, ಮಹಾದೇವ ಕೋಟ್ಯಾಳ, ಆನಂದ ಕಂಪು, ರವಿ ಕೊರ್ತಿ, ಅರುಣ ಬುದ್ನಿ, ರಾಜು ಕದಂ, ಪರಶುರಾಮ ಕಾಖಂಡಕಿ, ವಿಠ್ಠಲ



ತಟ್ರೆ, ಶಂಕರ ಹುನ್ನೂರ, ಬಾಬಾಗೌಡ ಪಾಟೀಲ, ಪ್ರವೀಣ ದಬಾಡಿ, ರಿದಂತೆ ಪಕ್ಷದ ಮುಖಂಡರು ಹಾಗೂ ಸೇ- ಕಾರ್ಯಕರ್ತರು ಭಾಗವಹಿಸಿದ್ದರು

ತಪ್ಪು ತಿದ್ದುವವರು ತಂದೆ-ತಾಯಿ ಹಾಗೂ ಗುರುಗಳು ಉತ್ತಮ ಮಾರ್ಗದಲ್ಲಿ ನಡೆಯಿರಿ: ಡಾ. ಹೈಂದವಿ ಮಧುಸೂದನ ಗುಪ್ತಾಜೀ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ತಪ್ಪು ಮಾಡಿದಾಗ ಅದನ್ನು ತಿದ್ದಿ ಸರಿದಾ-ರಿಗೆ ಕರೆತರುವವರು ತಂದೆ-ತಾಯಿ ಹಾಗೂ ಜೀವನದ ನಿಜವಾದ ಮಾರ್ಗದರ್ಶಕರಾದ ಗುರುಗಳು ಎಂದು ಶಾರದಾ ಶಾರದಾ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಬಿ.ಹೈಂದವಿ ಬಿ.ಮಧುಸೂದನ ಗುಪ್ತಾಜೀ ಹೇಳಿದರು.

ಪಟ್ಟಣದ ಶಾರದಾ ವಿದ್ಯಾನಿಕೇತನ ಬಿ. ಇಡಿ ಕಾಲೇಜು ಆವರಣದಲ್ಲಿ ಮಂಗಳವಾರದಂದು ಪ್ರಶಿಕ್ಷಣಾರ್ಥಿಗಳಿಂದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಶಾರದಾ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ದಿವಂಗತ ಬಿ.ಮಧುಸೂದನ್ ಗುಪ್ತಾಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು ಮಾನ್ವಿಯಲ್ಲಿ ಶಿಕ್ಷಣ ಭೀಷ್ಮ ಎಂದೇ ಪ್ರಸಿದ್ಧರಾಗಿದ್ದ ನಮ್ಮ ತಂದೆ ದಿವಂಗತ ಬಿ. ಮಧುಸೂದನ ಗುಪ್ತಾಜೀ ಅವರ ಶಿಕ್ಷಣ ಸೇವೆಯನ್ನು ಸ್ಮರಿಸಿದರು. ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಹೆಸರು ಸದಾ ಅಜರಾಮರವಾಗಿರುತ್ತದೆ. ಅವರು ಕಟ್ಟಿ ಬೆಳೆಸಿದ ಶಿಕ್ಷಣ ಸಂಸ್ಥೆಯನ್ನು ಎಲ್ಲರೂ ಜವಾಬ್ದಾರಿಯುತವಾಗಿ ಮುನ್ನಡೆಸಬೇಕು. ಸಂಸ್ಥೆಯ



ಮೌಲ್ಯಗಳು, ಶಿಸ್ತು ಹಾಗೂ ಗುಣಮಟ್ಟವನ್ನು ಉಳಿಸಿಕೊಂಡು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಕ್ಷಕರು ಹೇಳುವ ಒಳ್ಳೆಯ ವಿಚಾರಗಳನ್ನು ಅಳವಡಿಸಿಕೊಂಡು, ತಪ್ಪುಗಳನ್ನು ತಿದ್ದಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ಶಿಸ್ತು, ಪರಿಶ್ರಮ ಹಾಗೂ ಉತ್ತಮ ನಡತೆ ಯಶಸ್ವಿ ಬದುಕಿನ ಅಡಿಪಾಯಗಳಾಗಿವೆ. ಗುರುಗಳ ಮಾರ್ಗದರ್ಶನವನ್ನು ಗೌರವಿಸಿ, ಅವರ ಸಲಹೆಗಳನ್ನು ಜೀವನದಲ್ಲಿ ಅನುಸರಿಸಿದರೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ತಂದೆ-ತಾಯಿ ಮತ್ತು ಗುರುಗಳ ಆಶೀರ್ವಾದದೊಂದಿಗೆ ಸನ್ಮಾರ್ಗದಲ್ಲಿ ಸಾಗಿದರೆ ಜೀವನದಲ್ಲಿ ಯಶಸ್ಸು ಖಚಿತ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.ನಂತರ ಉಪನ್ಯಾಸಕರಾದ ಹನುಮಂತ ಗೌಡ ಮಾತನಾಡಿ ಡಾ ಸರ್ವಪಲ್ಲಿ ರಾಧಾಕೃಷ್ಣ ರವರು 1962 ರಲ್ಲಿ ರಾಷ್ಟ್ರಪತಿ ಆದ ದಿನದಿಂದ ಶಿಕ್ಷಕರ ದಿನಾಚರಣೆಯನ್ನು ಆಚ-ರಿಸಿಕೊಂಡು ಬರುತ್ತಿದ್ದೇವೆ. ನಾವು ರಾಧಾಕೃಷ್ಣರವರ ಮೌಲ್ಯಗಳನ್ನು ಜೀವನದಲ್ಲಿ ಪಾಲಿಸಿಕೊಂಡಾಗ ಮಾತ್ರ ಪರಿಣಾಮಕಾರಿಯಾಗಲು ಸಾಧ್ಯವಾಗುತ್ತದೆ.

ಶಿಕ್ಷಣ ವೃತ್ತಿ ಎನ್ನುವುದು ಎಲ್ಲಾ ವೃತ್ತಿಗಳಿಗಿಂತ ಶ್ರೇಷ್ಠ ವೃತ್ತಿ ಶಿಕ್ಷಕರ ವೃತ್ತಿ. ಶಿಕ್ಷಕರಾದವರು ಶಿಸ್ತು, ಕರ್ತವ್ಯ ನಿಷ್ಠೆ ಹಾಗೂ ತರಗತಿಗೆ ಪಾಠ ಬೋಧನೆ ಮಾಡಲು ಹೋಗುವುದಕ್ಕೆ ಮುಂಚೆ ಪೂರ್ವ ತಯಾರಿಯನ್ನು ಸಿದ್ಧತೆಯನ್ನು ಮಾಡಿಕೊಂಡು ತರಗತಿಗೆ ಹೋಗಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಉಪನ್ಯಾಸಕರಾದ ಈರಣ್ಣ ಮರ್ಲಟ್ಟಿ ಮಾತನಾಡಿ ಒಬ್ಬ ಉತ್ತಮವಾದ ಶಿಕ್ಷಕರಾಗಬೇಕೆಂದರೆ ಹರ್ಬರ್ಟ್ ರವರ ಪಂಚ ಸೋಪಾನಗಳ ಸೂತ್ರವನ್ನು ಹಾಗೂ ಕೌಶಲ್ಯಗಳನ್ನು ಅಳವಡಿಸಿಕೊಂಡು ಪಾಠ ಭೋದನೆ ಮಾಡಿದಾಗ ಉತ್ತಮವಾದ ಶಿಕ್ಷಕರಾಗಲು ಸಾಧ್ಯವಾಗುತ್ತದೆ. ಗುರುವಿನ ಗುಲಾಮನಾಗುವ ತನಕ ದೊರಯದಣ್ಣ ಮುಕುತಿ ಎಂಬ ನಾಣ್ಣುಡಿಯನ್ನು ಪ್ರತಿಯೊಬ್ಬ ಪ್ರಶಿಕ್ಷಣಾರ್ಥಿಗಳು ಅರಿತುಕೊಳ್ಳಬೇಕೆಂದು ಎಂದು ಹೇಳಿದರು.

ಕಾರ್ಯಕ್ರಮದ ಕುರಿತು ಪ್ರಶಿಕ್ಷಣಾರ್ಥಿಗಳಾದ ವರ್ಷಿತಾ, ಪದ್ಮಾವತಿ,ಮಹಮದ್ ಸಮೀರ್, ಚಂದ್ರಶೇಖರ, ದೇವರಾಜ ನಾಯಕ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಡಾ. ಪರಮೇಶಪ್ಪ ಗೋಪಶೆಟ್ಟಿ ಪ್ರಾಂಶುಪಾಲ ಮಾತನಾಡಿ ನಮ್ಮ ಜೀವನದ ನಡೆ ನುಡಿಗಳನ್ನು ಅಕ್ಷರ ಜ್ಞಾನವನ್ನು ದಾರೆ ಎರೆದ ಗುರಗಳನ್ನು ಯಾವತ್ತೂ ಮರೆಯಬಾರದು ಎಂದು ಹೇಳಿದರು. ನಾವು ಸಮಾಜದಲ್ಲಿ ಉತ್ತಮವಾದ ಶಿಕ್ಷಕರಾಗಬೇಕೆಂದರೆ ಬಿ.ಇಡಿ ಶಿಕ್ಷಣ ಕಲಿಸಿಕೊಡುತ್ತದೆ. ಶಿಕ್ಷಕರ ಜೀವನ ನಿಂತಿರೋದು 3 ಅಂಶಗಳ ಮೇಲೆ ನಿರೀಕ್ಷೆ, ಕಾರ್ಯಕ್ಷಮತೆ ಮತ್ತು ಅಂತಾರಾವಲೋಕನ ಅಂಶಗಳು ಒಳಗೊಂಡಿರಬೇಕು. ಈ ದೃಷ್ಟಿಕೋನದಲ್ಲಿ ಶಿಕ್ಷಕರು ಜೀವನವನ್ನ ಸಾಗಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗಳು ಮೊದಲು ಮಾನವನಾಗಬೇಕು. ಸಮಾಜ ಬಯಸುವ ಉತ್ತಮ ವ್ಯಕಿಗಳಾಗಿ ರುಪುಗೊಳ್ಳಿ ಎಂದು ಹೇಳಿದರು. ಪ್ರಶಿಕ್ಷಣಾರ್ಥಿಗಳು ನೀವು ಉತ್ತಮವಾಗಿ ಕಲಿತು ವಿದ್ಯಾರ್ಥಿಗಳಿಗೆ ಉತ್ತಮವಾಗಿ ಕಲಿಸಿ ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಶಾರದಾ ವಿದ್ಯಾನಿಕೇತನ ಸಂಸ್ಥೆಯ ಅಧ್ಯಕ್ಷರಾದ ಉಮಾಮಹೇಶ್ವರಿ ಬಿ. ಮಧುಸೂದನ್ ಗುಪ್ತಾಜಿ, ಆಡಳಿತ ಮಂಡಳಿಯ ಸದಸ್ಯರಾದ ಕಿಶೋರ್ ಕುಮಾರ,ಮಂಜುಳಾ ಕಿಶೋರ್ ಕುಮಾರ , ಅಭಿಜಿತ್, ಉಪನ್ಯಾಸಕರಾದ ವೀರಭದ್ರಯ್ಯ ಹಿರೇಮಠ, ಆನಂದ, ಲಿಂಗರಾಜ್, ಆಂಜನೇಯ ನಸಲಾಪುರ ಹಾಗೂ ಬಿ.ಇಡಿ ಪ್ರಥ-ಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಅಂಜಿನಪ್ಪ ಮತ್ತು ಮಹಮ್ಮದ್ ಪೀರ್ ನಿರೂಪಿಸಿದರು. ತನುಜಾ ಮತ್ತು ಚೈತ್ರಾ ಸ್ವಾಗತಿಸಿದರು.ಮಧುಶ್ರೀ ವಂದಿಸಿದರು.

ಸಾಹಿತ್ಯ ಸಿಂಚನ

ನೆರಳಿನೊಂದಿಗೆ ಸಂಭಾಷಣೆ

ನಾನು ಕೇಳಿದೆ "ನೀನು ಯಾರು?"
ನೆರಳು ನಕ್ಕು ಹೇಳಿತು "ನಿನ್ನ ಜೊತೆಗಿರುವವನು."

ಬೆಳಕಿದ್ದಾಗ ಮಾತ್ರ ಕಾಣಿಸುವೆ,
ಕತ್ತಲಾದಾಗ ಮೌನವಾಗಿ ಮರೆಯಾಗುವೆ.

"ನನ್ನ ನೋವು ನಿನಗೆ ಗೊತ್ತೇ?"
ಎಂದಾಗ ಅದು ತಲೆಯಾಡಿಸಿತು,
"ನಿನ್ನ ಮೌನದ ಪ್ರತಿಯೊಂದು ಅರ್ಥವೂ
ನನ್ನೊಳಗೆ ಉಳಿದಿದೆ" ಎಂದಿತು.

ನಾನು ನಡೆದ ದಾರಿಯಲ್ಲೆಲ್ಲ
ನನ್ನ ಹೆಜ್ಜೆ ಗುರುತುಗಳ ಜೊತೆಯಾದೆ,
ನಾನು ನಿಂತ ಕ್ಷಣಗಳಲ್ಲೂ
ನನ್ನ ಪಕ್ಕದಲ್ಲೇ ನಿಂತೆಯೆ.

"ನನ್ನನ್ನು ಬಿಟ್ಟು ಹೋಗುವುದಿಲ್ಲವೇ?"
ಎಂದೆನು ನಿಧಾನವಾಗಿ,
"ಬೆಳಕು ಇರುವವರೆಗೂ
ನಿನ್ನನ್ನು ಬಿಟ್ಟು ಹೋಗಲಾರೆ" ಎಂದಿತು.

ಆ ಕ್ಷಣದಲ್ಲಿ ಅರಿವಾಯಿತು?
ನೆರಳು ಕೇವಲ ದೇಹದ ಪ್ರತಿಬಿಂಬವಲ್ಲ,
ನಮ್ಮ ಏಕಾಂತದ ಮೌನ ಸಂಗಾತಿ,
ನಮ್ಮೊಳಗಿನ ಮಾತುಗಳ
ಮೌನ ಸಾಕ್ಷಿಯೂ ಹೌದು.

ತಂಜಿಮುಲ್ ಮುಸ್ಲಿಮೀನ್ ಕಮಿಟಿ ನೋಂದಣಿ ರದ್ದುಪಡಿಸುವ ಕುರಿತು ವಿಚಾರಣೆಗೆ ಸೂಚನೆ
7 ದಿನಗಳೊಳಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸಹಾಯಕ ನಿಬಂಧಕರಿಗೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರ: ತಂಜಿಮುಲ್ ಮುಸ್ಲಿಮೀನ್ ಕಮಿಟಿಯ ನೋಂದಣಿಯನ್ನು ಅಮಾನತುಗೊಳಿಸಿ, ಮುಂದಿನ ಕಾನೂನು ಕ್ರಮ ಕೈಗೊಳ್ಳುವಂತೆ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ ಸಲ್ಲಿಸಿದ್ದ ದೂರಿನ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ರಾಯಚೂರು ಸಹಕಾರ ಸಂಘಗಳ ಉಪನಿಬಂಧಕರು ಸೂಚನೆ ನೀಡಿದ್ದಾರೆ.

ಈ ಕುರಿತು ಸೆಪ್ಟೆಂಬರ್ 15, 2026ರಂದು ಪತ್ರ ಹೊರಡಿಸಲಾಗಿದ್ದು, ಪ್ರಕರಣದ ಕುರಿತು ವಿಚಾರಣೆ ನಡೆಸಿ ಏಳು ದಿನಗಳೊಳಗಾಗಿ ವರದಿ ಸಲ್ಲಿಸುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಯಚೂರು ಉಪವಿಭಾಗ ಇವರಿಗೆ ಸೂಚಿಸಲಾಗಿದೆ. ಈ ವಿಚಾರ ಇದೀಗ ತಡವಾಗಿ ಬೆಳಕಿಗೆ ಬಂದಿದೆ.

ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯ ಪದಾಧಿಕಾರಿಗಳು ಹಾಗೂ 220ಕ್ಕೂ ಹೆಚ್ಚು ಸದಸ್ಯರು ಸೆಪ್ಟೆಂಬರ್ 10ರಂದು ರಾಯಚೂರಿನ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿ, ವಕ್ಫ್ ಬೋರ್ಡ್ ಕಚೇರಿ ಹಾಗೂ ಸಹಕಾರ ಸಂಘಗಳ ಉಪನಿಬಂಧಕರ



ಕಚೇರಿಗೆ ಭೇಟಿ ನೀಡಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಸಲ್ಲಿಸಿದ್ದರು.

ತಂಜಿಮುಲ್ ಮುಸ್ಲಿಮೀನ್ ಕಮಿಟಿಯು ತನ್ನ ಬೈಲಾದಲ್ಲಿನ ನಿಯಮಗಳನ್ನು ಉಲ್ಲಂಘಿಸಿ, ಲಿಂಗಸೂಗೂರ ಪುರಸಭೆ ವ್ಯಾಪ್ತಿಯಲ್ಲಿರುವ ಮಸ್ಜಿದ್‌ಗಳ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂದು ಅಂಜುಮನ್ ಕಮಿಟಿಯವರು ದೂರಿನಲ್ಲಿ ಆರೋಪಿಸಿದ್ದಾರೆ. ಅಲ್ಲದೆ, ಅಂಜುಮನ್ ಲಿಂಗಸೂಗೂರ ತಾಲೂಕು ಕಮಿಟಿಯ ಕಾರ್ಯಕ್ರಮಗಳು ಹಾಗೂ ಎಲಾನ್‌ಗಳಿಗೆ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಲಾಗುತ್ತಿದೆ ಎಂಬ ಆರೋಪವನ್ನೂ ಮಾಡಿದ್ದಾರೆ.

ಇದರೊಂದಿಗೆ, ಇತ್ತೀಚೆಗೆ ಲಿಂಗಸೂಗೂರ ಪೊಲೀಸ್ ಠಾಣೆಯಲ್ಲಿ ನಡೆದ ಘಟನೆಯೊಂದರಲ್ಲಿ ತಂಜಿಮುಲ್ ಮುಸ್ಲಿಮೀನ್ ಕಮಿಟಿಯ ಕೆಲವು ಪದಾಧಿಕಾರಿಗಳು ಹಾಗೂ ಬೆಂಬಲಿಗರು ಅಂಜುಮನ್ ಕಮಿಟಿಯವರ ವಿರುದ್ಧ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕಾನೂನುಬದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಈ ಎಲ್ಲಾ ಆರೋಪಗಳು ಹಾಗೂ ಕಮಿಟಿಯ ನೋಂದಣಿ ಮತ್ತು ಬೈಲಾ ನಿಯಮಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ವಿಚಾರಣೆ ನಡೆಸಿ, ಏಳು ದಿನಗಳೊಳಗಾಗಿ ವರದಿ ಸಲ್ಲಿಸುವಂತೆ ಸಹಕಾರ ಸಂಘಗಳ ಉಪನಿಬಂಧಕರು ಸಹಾಯಕ ನಿಬಂಧಕರಿಗೆ ಸೂಚಿಸಿರುವುದು ಇದೀಗ ಗಮನ ಸೆಳೆದಿದೆ.

ಈ ಕುರಿತು ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯ ಗೌರವಾಧ್ಯಕ್ಷರಾದ ಅನ್ಸರುದ್ದಿನ್ ಮಾತನಾಡಿ, "ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ವಿಚಾರಣೆ ನಡೆಸಿ, ಕಮಿಟಿಯ ನೋಂದಣಿ ದಾಖಲೆಗಳು, ಬೈಲಾ ನಿಯಮಗಳು ಹಾಗೂ ದೂರಿನಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ನಿಯಮ ಉಲ್ಲಂಘನೆಗಳು ದೃಢಪಟ್ಟಲ್ಲಿ ಕಾನೂನು ಪ್ರಕಾರ ತಂಜಿಮುಲ್ ಮುಸ್ಲಿಮೀನ್ ಕಮಿಟಿಯ ನೋಂದಣಿ ರದ್ದುಪಡಿಸುವ ಕುರಿತು ಕ್ರಮ ಕೈಗೊಳ್ಳಬೇಕು," ಎಂದು ಮಾಧ್ಯಮದ ಮೂಲಕ ಒತ್ತಾಯಿಸಿದ್ದಾರೆ. ವಿಚಾರಣೆ ಪೂರ್ಣಗೊಂಡ ಬಳಿಕ ಅಧಿಕಾರಿಗಳು ಸಲ್ಲಿಸುವ ವರದಿ ಹಾಗೂ ಲಭ್ಯ ದಾಖಲೆಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

150 ಕೋಟಿ ರೂ ವೆಚ್ಚದಲ್ಲಿ 7 ಜಿಲ್ಲೆಗಳ 500 ಕೆರೆ ಪುನಶ್ಚೇತನಕ್ಕೆ ಸಚಿವ ಈಶ್ವರ ಖಂಡ್ರೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದ 7 ಜಿಲ್ಲೆಗಳ 500 ಕೆರೆಗಳ ಪುನಶ್ಚೇತನಕ್ಕೆ ವಿಶ್ವಬ್ಯಾಂಕ್ ನೆರವಿನಡಿ 150 ಕೋಟಿ ರೂ. ಸಮಗ್ರ ಯೋಜನಾ ವರದಿ ಸಿದ್ಧವಾಗಿದ್ದು, ಸಮರೋಪಾದಿಯಲ್ಲಿ ಕೆರೆ ಅಭಿವೃದ್ಧಿ ಮಾಡುವಂತೆ ಸಂಬಂಧಿತ ಸಿಇಓಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.



ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ವಿಕಾಸಸೌಧದ ತಮ ಕಚೇರಿಯಲ್ಲಿ ಎಲ್ಲ ಜಿಲ್ಲೆಗಳ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಅವರು, ಬೆಂಗಳೂರು ನಗರ, ಗ್ರಾಮಾಂತರದ 135 ಕೆರೆಗಳಿಗೂ ಬರಲಿದೆ ಜೀವಕಳೆ ಬರಲಿದೆ. 7 ಜಿಲ್ಲೆಗಳ 500 ಕೆರೆ ಪುನಶ್ಚೇತನಕ್ಕೆ 150 ಕೋಟಿ ರೂ. ಸಮಗ್ರ ಯೋಜನಾ ವರದಿ ಸಿದ್ದವಾಗಿದೆ ಎಂದರು. ವಿಶ್ವಬ್ಯಾಂಕ್ ಯೋಜನೆಯಡಿ ಬೆಂಗಳೂರು ಗ್ರಾಮಾಂತರ -68, ಬೆಂಗಳೂರು ನಗರ -67, ಬೀದರ್-44, ಚಿಕ್ಕಬಳ್ಳಾಪುರ -90, ಕಲ್ಬುರ್ಗಿ-49, ತುಮಕೂರು -96 ಮತ್ತು ಕೋಲಾರ ಜಿಲ್ಲೆಯ-86 ಕೆರೆಗಳ ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಆಗುತ್ತಿರುವುದನ್ನು ಸಿಇಓಗಳು ಮತ್ತು ಪಿಡಿಓಗಳು ಖಚಿತಪಡಿಸಿಕೊಳ್ಳಬೇಕು. ನಿಯಮಿತವಾಗಿ ನೀರಿನ ಪರೀಕ್ಷೆ ಮಾಡಬೇಕು. ಕಲುಷಿತ ನೀರಿನ ದೂರು ಬಂದರೆ ಕೂಡಲೇ ಜಲ ಮೂಲದಿಂದ ಹಿಡಿದು ಮನೆಯ ನಲ್ಲಿಯವರೆಗೆ ಪ್ರತಿಯೊಂದು ಹಂತದಲ್ಲೂ ಪರಿಶೀಲನೆ ನಡೆಸಿ, ತ್ಯಾಜ್ಯ ನೀರು ಸೇರದಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು. ಬೆಂಗಳೂರು, ಬೆಳವಾವಿ, ಉತ್ತರ ಕನ್ನಡ, ಧಾರವಾಡ, ಕೊಡಗು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ವಿಬಿಜಿ ರಾಮ್ ಜಿ ಅಡಿ ಮಾನವ ದಿನ ಸೃಜನೆ ಕಡಿಮೆ ಪ್ರಮಾಣದಲ್ಲಿದೆ. ಪ್ರಸ್ತುತ ರಾಜ್ಯ ವಸತಿ ಯೋಜನೆಗಳನ್ನೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವ್ಯಾಪ್ತಿಗೆ ಸೇರಿಸಿರುವ ಹಿನ್ನೆಲೆಯಲ್ಲಿ ಎಲ್ಲ ನಗರ ಪಟ್ಟಣದಲ್ಲೂ ಉದ್ಯೋಗ ನೀಡಲು ಅವಕಾಶವಿದೆ. ಇದನ್ನು ಬಳಸಿಕೊಂಡು ರಾಜ್ಯದ ಯಾವುದೇ ಭಾಗದಿಂದ ಯಾರೊಬ್ಬರೂ ಗುಳೆ ಹೋಗದಂತೆ ತಡೆಯಬೇಕು ಎಂದು ಈಶ್ವರ ಖಂಡ್ರೆ ಹೇಳಿದರು. 15 ದಿನದೊಳಗೆ ಕೂಲಿ ಹಣ ಪಾವತಿಸಿ: ವಿಬಿಜಿ ರಾಮ್ ಜಿ ಅಡಿ ಕೆಲಸ ಮಾಡಿದ ಕಾರ್ಮಿಕರಿಗೆ ತಿಂಗಳಾದರೂ ಕೂಲಿ ಹಣ ಪಾವತಿಸದಿದ್ದರೆ ಅವರು ಕೆಲಸಕ್ಕೆ ಬರುವುದಿಲ್ಲ, ಆಗ ಯೋಜನೆಯ ಉದ್ದೇಶವೇ ವಿಫಲವಾಗುತ್ತದೆ. 15 ದಿನಗಳ ಒಳಗಾಗಿ ಕೂಲಿ ಪಾವತಿಗೆ ಕ್ರಮ ಕೈಗೊಳ್ಳಬೇಕು. ಸಿಇಓಗಳು ಪಿಡಿಓಗಳಿಗೆ ಮತ್ತು ಖಜಾನೆ ಅಧಿಕಾರಿಗಳಿಗೆ ಈ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ತಿಳಿಸಿದರು. ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲ ಸೇರಿದಂತೆ ಹಿರಿಯ ಅಧಿಕಾರಿಗಳು, ಸಿಇಓಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಜಾಲಹಳ್ಳಿಯಲ್ಲಿ 'ಹುಲಿ ಬೀರ' ಚಿತ್ರದ ಪ್ರಚಾರ

"ದೇವದುರ್ಗ ಎಂದರೆ ನನಗೆ ಎಮೋಷನ್, ಇಲ್ಲಿನ ಜನರ ಪ್ರೀತಿ ಮರೆಯಲಾಗದು" ರೂರಲ್ ಸ್ಟಾರ್ ಅಂಜನ್

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣಕ್ಕೆ 'ಹುಲಿ ಬೀರ' ಚಿತ್ರದ ಬಿಡುಗಡೆ ಪ್ರಚಾರದ ಅಂಗವಾಗಿ ಉತ್ತರ ಕರ್ನಾಟಕದ ಯುವ ನಟ ರೂರಲ್ ಸ್ಟಾರ್ ಅಂಜನ್ ಅವರು ಸೋಮವಾರ ಬೆಳಗ್ಗೆ ಆಗಮಿಸಿದರು.

ಬೆಳಗ್ಗೆ 10.30ಕ್ಕೆ ಜಾಲಹಳ್ಳಿಗೆ ಆಗಮಿಸಿದ ನಟ ಅಂಜನ್ ಅವರನ್ನು ಅಭಿಮಾನಿಗಳು ಹಾಗೂ ಸ್ಥಳೀಯರು ಆತ್ಮೀಯವಾಗಿ ಸ್ವಾಗತಿಸಿದರು. ಬಳಿಕ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ಅವರು, ಅಭಿಮಾನಿಗಳು ಹಾಗೂ ಸ್ಥಳೀಯರೊಂದಿಗೆ ಚಿತ್ರದ ಕುರಿತು ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಂಜನ್, "ನನಗೆ ದೇವದುರ್ಗ ಎಂದರೆ ಎಮೋಷನ್. ದೇವದುರ್ಗ ನನ್ನ ಮನೆಯಂತಿದೆ. ಇಲ್ಲಿನ ಜನರು ತೋರಿಸುತ್ತಿರುವ ಪ್ರೀತಿ ಹಾಗೂ ಆತ್ಮೀಯತೆಯನ್ನು ಎಂದಿಗೂ ಮರೆಯಲಾಗದು" ಎಂದು ಭಾವುಕರಾಗಿ ಹೇಳಿದರು. ಉತ್ತರ ಕರ್ನಾಟಕದ ಮಣ್ಣಿನ ಸೊಗಡನ್ನು ಒಳಗೊಂಡಿರುವ 'ಹುಲಿ ಬೀರ' ಚಿತ್ರವು ಅಕ್ಟೋಬರ್ 2ರಂದು ತೆರೆಕಾಣಲಿದೆ. ಉತ್ತರ ಕರ್ನಾಟಕದ ಕಲಾವಿದರು ಹಾಗೂ ಯುವ ಪ್ರತಿಭೆಗಳಿಗೆ ಪ್ರೇಕ್ಷಕರ ಪ್ರೋತ್ಸಾಹ ಅಗತ್ಯವಾಗಿದ್ದು, ಚಿತ್ರಮಂದಿರಕ್ಕೆ ತೆರಳಿ ಚಿತ್ರ ವೀಕ್ಷಿಸುವ ಮೂಲಕ ಬೆಂಬಲ ನೀಡುವಂತೆ ಅವರು ಮನವಿ ಮಾಡಿದರು.

ಚಿತ್ರದ ಪ್ರಚಾರಕ್ಕೆ ಮಾಧ್ಯಮದ ಮೂಲಕ ಬೆಂಬಲ ನೀಡುತ್ತಿರುವ ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಅಂಜನ್ ಅಭಿನಂದನೆ ಮತ್ತು ಕೃತಜ್ಞತೆ ಸಲ್ಲಿಸಿದರು. ಕಾರ್ಯಕ್ರಮದ ವೇಳೆ ಭದ್ರತೆ ಹಾಗೂ ಸಹಕಾರ ನೀಡಿದ ಪೊಲೀಸ್ ಇಲಾಖೆಯ ಸಿಬ್ಬಂದಿಗೂ ಧನ್ಯವಾದ ತಿಳಿಸಿದರು.

ಈ ಸಂದರ್ಭದಲ್ಲಿ ತಿಮ್ಮಣ್ಣ ನಾಯಕ್



ದಿವಾನ, ಶ್ರೀಮತಿ ರೂಪಾ ಶ್ರೀನಿವಾಸ್ ನಾಯಕ, ಬಸವರಾಜ್ ರಾಂಪಳ್ಳಿ, ರಂಗನಾಥ ಮಕಾಸಿ, ಶಿವರಾಜ ಕಕ್ಕಲದೊಡ್ಡಿ, ವೀರೇಶ್ ಅರಕೇರಾ, ರಂಗನಾಥ ಮುರಾಳ, ಮಲ್ಲು ಚಿಂತಲಕುಂಟ, ರಾಚಣ್ಣ ನಾಯಕ್ ಕೋಳೂರು, ತಿಮ್ಮಣ್ಣ ಅರಕೇರಾ, ರಂಗನಾಥ ದೇವದುರ್ಗ ಸೇರಿದಂತೆ ಹಲವು ಮುಖಂಡರು, ಅಭಿಮಾನಿಗಳು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು. ನಟ ಅಂಜನ್ ಅವರೊಂದಿಗೆ ಅಭಿಮಾನಿಗಳು ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು.

ಜಾಲಹಳ್ಳಿ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನಕ್ಕೆ ಯಾತ್ರಿ ನಿವಾಸ ನಿರ್ಮಾಣಕ್ಕೆ 50 ಲಕ್ಷ ಅನುದಾನಕ್ಕೆ ಮನವಿ ಕೆ.ಪಿ.ಸಿ.ಸಿ. ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಯೋಜಕರಾದ ವೇಣುಗೋಪಾಲಗೌಡ ಹೆಚ್. ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಐತಿಹಾಸಿಕ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನಕ್ಕೆ ಭಕ್ತಾದಿಗಳ ಅನುಕೂಲಕ್ಕಾಗಿ 'ಯಾತ್ರಿ ನಿವಾಸ' ನಿರ್ಮಿಸಲು ?50 ಲಕ್ಷ ಅನುದಾನ ಮಂಜೂರು ಮಾಡುವಂತೆ ಕೆ.ಪಿ.ಸಿ.ಸಿ. ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಯೋಜಕರಾದ ವೇಣುಗೋಪಾಲಗೌಡ ಹೆಚ್. ಪಾಟೀಲ್ ಅವರು ಮನವಿ ಮಾಡಿದ್ದಾರೆ.

ಈ ಕುರಿತು ಬೆಂಗಳೂರಿನ ವಿಧಾನಸೌಧದಲ್ಲಿ ಕರ್ನಾಟಕ ಸರ್ಕಾರದ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಸಚಿವರಾದ ಕೆ.ಎಸ್. ಬಸವಂತಪ್ಪ ಅವರನ್ನು ಭೇಟಿ ಮಾಡಿದ ವೇಣುಗೋಪಾಲಗೌಡ



ಅವರು ಮನವಿ ಪತ್ರ ಸಲ್ಲಿಸಿದರು. ಸುಮಾರು 150 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸುತ್ತಮುತ್ತಲಿನ ಸುಮಾರು 50ಕ್ಕೂ ಹೆಚ್ಚು ಗ್ರಾಮಗಳ ಭಕ್ತರ ಆರಾಧನಾ ಕೇಂದ್ರವಾಗಿದೆ. ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ 15 ದಿನಗಳ ಕಾಲ ಇಲ್ಲಿ ವೈಭವದ ಜಾತ್ರೆ ನಡೆಯುತ್ತಿದ್ದು, ವಿವಿಧ ವರ್ಗಗಳ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಸೇವೆ ಸಲ್ಲಿಸುತ್ತಾರೆ.

ದೂರದ ಊರುಗಳಿಂದ ಆಗಮಿಸುವ ಭಕ್ತಾದಿಗಳಿಗೆ ತಂಗಲು ಸಮರ್ಪಕ ವಸತಿ ವ್ಯವಸ್ಥೆ ಇಲ್ಲದಿರುವುದರಿಂದ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆಯ ವತಿಯಿಂದ ?50 ಲಕ್ಷ ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಿಸಲು ಅಗತ್ಯ ಅನುದಾನ ಮಂಜೂರು ಮಾಡುವಂತೆ ಸಚಿವರಿಗೆ ವೇಣುಗೋಪಾಲಗೌಡ ಹೆಚ್. ಪಾಟೀಲ್ ಅವರು ಮನವಿ ಮಾಡಿದ್ದಾರೆ.

ಬರಪಿಡಿತ ಪ್ರದೇಶದ ರೈತರ ಸಾಲ ಮನ್ನಾಕ್ಕೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಅಗ್ರಹ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ರಾಜ್ಯದಲ್ಲಿ ವರುಣದೇವನ ಕೃಪ ಇಲ್ಲದೆ ರಾಜ್ಯದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು ಕೂಡ ರೈತರ ನೆರವಿಗೆ ಸರ್ಕಾರ ಧಾವಿಸುವ ಜೊತೆಗೆಬರ ಪೀಡಿತ ಪ್ರದೇಶಗಳೆಂದು ಘೋಷಣೆಯಾಗಿರುವ ವ್ಯಾಪ್ತಿಯ ರೈತರ ಕೃಷಿ ಪತ್ತಿನ ಸಹಕಾರ ಸಂಘದ ಸಾಲವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕು.

ಹಾಗೂ ಕೇಂದ್ರ ಸರ್ಕಾರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬರಪಿಡಿತ ಪ್ರದೇಶದ ವ್ಯಾಪ್ತಿಯ ರೈತರು ಪಡೆದಿರುವ ಬೆಳೆ ಸಾಲಗಳನ್ನು ಸಹ ಮನ್ನಾ ಮಾಡಿ ಬರದಿಂದಿರ ತತ್ತರಿಸಿರುವ ರೈತರ ರಕ್ಷಣೆಗೆ ಮುಂದಾಗಬೇಕೆಂದು ಒತ್ತಾಯಿಸಿ ನಂಜನಗೂಡಿನಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜು ನೇತೃತ್ವದಲ್ಲಿಪ್ರತಿಭಟನೆ ನಡೆಸಿದರು

ಎನ್ ಡಿ ಆರ್ ಎಫ್ ಮತ್ತು ಎಸ್ ಡಿ ಆರ್ ಎಫ್ ಮಾನದಂಡ ವೈಜ್ಞಾನಿಕವಾಗಿ ಮತ್ತು ಪ್ರಸ್ತುತ ಸನ್ನಿವೇಶಕ್ಕೆ ಅನುಕೂಲವಾದ ರೀತಿಯಲ್ಲಿ ಮಾರ್ಪಾಡು ಮಾಡಬೇಕು. ರಾಜ್ಯದಲ್ಲಿ ಇರುವಂತಹ ಮುಖ್ಯಮಂತ್ರಿಯಿಂದ ಶಾಸಕರ ತನಕ ಮತ್ತು ರಾಜ್ಯದಿಂದ ಆಯ್ಕೆಯಾಗಿರುವ ಲೋಕಸಭಾ ಸದಸ್ಯರು ಎಲ್ಲರೂ ಸಹ ತಮ್ಮ ಸಂಬಳ ಸಾರಿಗೆ ವೈಭವಿತ ಜೀವನವನ್ನು ಭರದ



ನಡುವೆ ನಡೆಸುತ್ತಿದ್ದಾರೆ ಬರದ ಅಧ್ಯಯನದ ಖರ್ಚನ್ನು ಸಹ ಸರ್ಕಾರದಿಂದ ಪಡೆಯುತ್ತಾರೆ.

ಮೂರು ದಿನದ ಅಧಿವೇಶನಕ್ಕೆ ಕೋಟಿ ಕೋಟಿ ರೂಪಾಯಿಯನ್ನು ಸಹ ಸಂಬಳ ಸಾರಿಗೆ ಪಡೆದುಕೊಂಡು ರೈತರಿಗೆ ಪರಿಹಾರ ಕೊಡುವಲ್ಲಿ ಕೇಂದ್ರದ ಮೇಲೆ ರಾಜ್ಯ ರಾಜದ ಮೇಲೆ ಕೇಂದ್ರ ಕೈ ತೋರಿಸಿಕೊಂಡು ಕೈಕಟ್ಟಿ ಕುಳಿತಿದ್ದಾರೆ ಆದರೆ ಬರದ ಪಟ್ಟಿಯನ್ನು ರೈತನ ಬೆನ್ನಿಗೆ ಕಟ್ಟಿ ಬರ ದ ಹೆಸರಿನಲ್ಲಿ ರಾಜಕೀಯ ಮಾಡಲು ಹೊರಟಿರುವ ಆಡಳಿತ ಮತ್ತು ವಿರೋಧ ಪಕ್ಷಗಳು ಈಗಲಾದರೂ ರೈತನ ಅನ್ನವನ್ನು ತಿನ್ನುತ್ತಿದ್ದರೆ ತಕ್ಷಣ ರೈತರ ಸಮಸ್ಯೆಗೆ ಸ್ಪಂದಿಸಿ ವೈಜ್ಞಾನಿಕ ಬೆಳೆ ನಷ್ಟ ನೀಡಲು ಕ್ರಮ ಕೈಗೊಳ್ಳಲಿ. ಬರಪೀಡಿತ ಘೋಷಣೆ ದಿನಾಂಕದಿಂದ ರಾಜ್ಯದಲ್ಲಿ ಸಂಪೂರ್ಣ ಬರ ನಿಲ್ಲುವ ತನಕ ಯಾವುದೇ ಮಂತ್ರಿ ಶಾಸಕ ಲೋಕಸಭಾ ಸದಸ್ಯರು ಬರ ನಿರ್ವಹಣೆಗೆ ಹಣವನ್ನು ನೀಡಿ ಇವರಿಗೆ ಇರುವ ವಿಶೇಷ ಸೌಲಭ್ಯದ ಯಾವುದೇ ಸೌಲಭ್ಯಗಳನ್ನು ಪಡೆಯುವುದನ್ನು ಕೈಬಿಡಬೇಕು ಆಗ ಚುನಾಯಿತ ಪ್ರತಿಭೆಗಳು ರೈತ ಪರ ಇದ್ದಾರೆ ಎಂದು ತಿಳಿದುಕೊಳ್ಳಬಹುದು ಇದನ್ನು ಇಂದಿನ ಅದಿವೇಶನದಲ್ಲಿ ಪಕ್ಷಾತೀತವಾಗಿ ಎಲ್ಲಾ ಶಾಸಕರು ಘೋಷಣೆ ಮಾಡಲಿ ಎಂದು ಭಾಗ್ಯರಾಜ್ ಆಕ್ರೋಶ ವ್ಯಕ್ತಪಡಿಸಿದರು ಕಬಿನಿ ಮತ್ತು ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯ ರೈತರಿಗೆ ಬೆಳೆ ಮಾಡಲು ನೀರು ನೀಡಲು ವಿಫಲವಾಗಿರುವ ಕಾರಣ ತಕ್ಷಣ ಪ್ರತಿ ಎಕರೆಗೆ 50,000 ಬೆಳೆ ನಷ್ಟ ಘೋಷಣೆ ಮಾಡಬೇಕು. ತಮಿಳುನಾಡಿಗೆ ನೀರು ಬಿಟ್ಟು ಕಬಿನಿ ವ್ಯಾಪ್ತಿಯ ರೈತರಿಗೆ ಸಾಕಷ್ಟು ತೊಂದರೆಯಾಗುತ್ತಿದೆ ಆದ್ದರಿಂದ ತಕ್ಷಣ ಕಬಿನಿ ಇಂದ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮೇವು ಕೇಂದ್ರಗಳು ಆರಂಭವಾಗಬೇಕು. ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಬರಬೇಕಾದ ಬಾಕಿ50 ರೂಪಾಯಿ ಮೈಸೂರು ಚಾಮರಾಜನಗರ ಜಿಲ್ಲೆಯಲ್ಲಿ ಸುಮಾರು 8 ಕೋಟಿ ಅಷ್ಟು ರೈತರಿಗೆ ಹಣವನ್ನು ತಕ್ಷಣ ಕೊಡಿಸಬೇಕು. ಸಕ್ಕರೆ ಬೆಲೆ ಜಾಸ್ತಿ ಆಗಿರುವುದರಿಂದ ಪ್ರತಿ ಟನ್ ಕಬ್ಬಿಗೆ 6,000 ನಿಗದಿಗೆ ಒತ್ತಾಯ. ಕಬ್ಬು ಬೆಳೆಗಾರರಿಗೆ ಉತ್ತರ ದಕ್ಷಿಣ ಎಂಬ ತಾರಾತಮ್ಯವಿಲ್ಲದೆ ಕಟಾವು ಸಾಗಾಣಿಕೆಯನ್ನು ಕಾರ್ಖಾನೆ ಮಾಲೀಕರೇ ಬರಿಸಬೇಕು.

ಕಬ್ಬು ಖರೀದಿ ಮಂಡಳಿಯನ್ನು ತಕ್ಷಣ ಪುನರ್ ರಚನೆ ಆಗಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮೇವು ಪೂರೈಕೆ ಕೇಂದ್ರಗಳನ್ನು ಸರ್ಕಾರ ಆರಂಭಿಸಬೇಕು. ಬರದಿಂದ ನೊಂದಿರುವ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಗೆ ಹೆಚ್ಚುವರಿ 5 ರೂಪಾಯಿ ಘೋಷಣೆ ಮಾಡಬೇಕು. ಮೈಸೂರ್ ಜಿಲ್ಲೆಯ ನಂಜನಗೂಡು ತಾಲೋಕ್ ನ ಕಸುವಿನಹಳ್ಳಿ ಗ್ರಾಮದ ಹೊಸಕೆರೆಗೆ ನೀರು ತುಂಬಿಸಲು ಕ್ರಿಯಾಯೋಜನೆ ತಯಾರು ಮಾಡಿ ಅಂತರ್ಜಲ ವೃದ್ಧಿ ಹಾಗೂ ಜಾನುವಾರಗಳಿಗೆ ಕುಡಿಯೋ ನೀರಿಗೆ ಅನುಕೂಲ ಮಾಡಿಕೊಳ್ಳಲು ತಕ್ಷಣ ಕ್ರಮ ಕೈಗೊಳ್ಳಬೇಕು , ಹಾಗೂ ಹುರ ಕೆರೆಯ ಪ್ರಾಜೆಕ್ಟ್ ನ 26ಕೆರೆ ಗಳಿಗೆ ಶೀಘ್ರ ನೀರು ತುಂಬಿಸುವಲು ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ಕಟ್ಟೆಗಳಿಗೆ ನೀರು ತುಂಬಿಸಲ ಜಾರಿಯಾಗಿರುವ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಲು ಸೂಚಿಸಬೇಕು. ಎಂದು ಒತ್ತಾಯಿಸುತ್ತಿದ್ದೇವೆ ತಕ್ಷಣ ರಾಜ್ಯ ಸರ್ಕಾರ ರೈತರ ನೆರವಿಗೆ ಧಾವಿಸಿ ಈ ಮೇಲ್ಕಂಡ ಹಕ್ಕುಗಳನ್ನು ಜಾರಿಗೆ ತರಲು ಕ್ರಮ ವಹಿಸಬೇಕು ಇಲ್ಲವಾದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ತಿಳಿಯಬಯಸುತ್ತೇವೆ

ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕರೆಹುಂಡಿ ಭಾಗ್ಯರಾಜ ಖಜಾಂಚಿ ಕೆರೆಹುಂಡಿ ರಾಜಣ್ಣ ಒಳಗೆರೆ ಗಣೇಶ್. ಪ್ರಕಾಶ್ ಗಾಂಧಿ ಕಸುವಿನಹಳ್ಳಿ ಮಂಜೇಶ್. ಸಿಸಿ ಶಿವರುದ್ರಪ್ಪ ಸಿದ್ದಯ್ಯನ ಹುಂಡಿ ಸೋಮಣ್ಣ. ಕೀರ್ತಿ.ಮಂಜು. ದೇವಿರಮ್ಮನಹಳ್ಳಿಹುಂಡಿ ದೇವಿರಮ್ಮನಹಳ್ಳಿ ಪಪ್ಪು ಸ್ವಾಮಿ ಪುಟ್ಟಸ್ವಾಮಿ ಸಿದ್ಧಬಸಪ್ಪ ಶ್ರೀಕಂಠ ಅಂಗಡಿ ಜಗದೀಶ್ ಮಹೇಶ್ ದೇವನೂರು ನಾಗೇಂದ್ರ. ಹದಿನಾರು ಭುಜಂಗಪ್ಪ ಹೊಸಪುರ ಮಾದಪ್ಪ ನಂದಿಗುಂದ ಸಿದ್ದಪ್ಪ ಮುದ್ದಾಹಳ್ಳಿ ಮಧು. ಕುಮಾರಸ್ವಾಮಿ ನರ್ಸರಿ ಜೆಸಿಬಿ ಚಿದಂಬರ. ಅಂಡುವಿನಹಳ್ಳಿ ಮಹೇಶ್ ಮಹದೇವಪ್ಪ ಮುಂತಾದ ನೂರಾರು ಜನರು ಹಾಜರಿದ್ದರು

ನೇಮಕಾತಿ ಪ್ರಕಟಣೆ

DHFWS ಕಲಬುರಗಿ ನೇಮಕಾತಿ 2026 – 3 ಕ್ಲಿನಿಕಲ್ ಸೈಕಾಲಜಿಸ್ಟ್ ಮತ್ತು ಆಪ್ಟೋಮೆಟ್ರಿಸ್ಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 18, 2026

DHFWS ಕಲಬುರಗಿ ನೇಮಕಾತಿ 2026: 3 ಕ್ಲಿನಿಕಲ್ ಸೈಕಾಲಜಿಸ್ಟ್ ಮತ್ತು ಆಪ್ಟೋಮೆಟ್ರಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (DHFWS) ಕಲಬುರಗಿಯು, ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಕ್ಲಿನಿಕಲ್ ಸೈಕಾಲಜಿಸ್ಟ್ ಮತ್ತು ಆಪ್ಟೋಮೆಟ್ರಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕಲಬುರಗಿಯಲ್ಲಿ ಕರ್ನಾಟಕ ಸರ್ಕಾರದ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 27–ಸೆಪ್ಟೆಂಬರ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: kalaburagi.nic.in

101 ಬರಪೀಡಿತ ತಾಲೂಕುಗಳಲ್ಲಿ ಸುಮಾರು 18 ಸಾವಿರ ಕೋಟಿ ನಷ್ಟ : ಸಚಿವ ಪರಮೇಶ್ವರ್

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಬರದ ವ್ಯಾಪ್ತಿ ದಿನದಿಂದ ದಿನಕ್ಕೆ ವಿಸ್ತರಿಸುತ್ತಿದ್ದು, ಈಗಾಗಲೇ ಮೊದಲ ಹಂತದಲ್ಲಿ ಘೋಷಿಸಿರುವ 101 ಬರಪೀಡಿತ ತಾಲೂಕುಗಳಲ್ಲಿ ಸುಮಾರು 18 ಸಾವಿರ ಕೋಟಿ ನಷ್ಟ ಸಂಭವಿಸಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ವಿಧಾನ ಪರಿಷತ್‌ನಲ್ಲಿ ತಿಳಿಸಿದ್ದಾರೆ.



ಇದೇ ವೇಳೆ ಹಂತ ಹಂತವಾಗಿ ಮತ್ತಷ್ಟು ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡುವ ಪ್ರಕ್ರಿಯೆ ಮುಂದುವರಿದಿದ್ದು, ಇಂದು 53 ತಾಲೂಕುಗಳನ್ನು ಹೆಚ್ಚುವರಿಯಾಗಿ ಘೋಷಿಸುವುದಾಗಿ ಸರ್ಕಾರ ತಿಳಿಸಿದೆ. ಇದರಿಂದ ಒಟ್ಟು ಬರಪೀಡಿತ ತಾಲೂಕುಗಳ ಸಂಖ್ಯೆ ಸುಮಾರು 177ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ. ವಿಧಾನಮಂಡಲದ ವಿಶೇಷ ಅಧಿವೇಶನದ ಅಂಗವಾಗಿ ನಡೆದ ಚರ್ಚೆಯಲ್ಲಿ ಬರ ಪರಿಸ್ಥಿತಿ ಕುರಿತು ಮಾಹಿತಿ ನೀಡಿದ ಪರಮೇಶ್ವರ್, ಬರಪೀಡಿತ ತಾಲೂಕುಗಳ ಘೋಷಣೆಯನ್ನು ರಾಜ–ಕೀಯ ಒತ್ತಡ ಅಥವಾ ಯಾವುದೇ ವ್ಯಕ್ತಿಯ ರಾಜೀನಾಮೆ ಬೆದ–ರಿಕೆಯನ್ನು ಆಧರಿಸಿ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಕೇಂದ್ರ ಸರ್ಕಾರದ 2020ರ ಬರ ನಿರ್ವಹಣಾ ಕೈಪಿಡಿಯಲ್ಲಿ ನಿಗದಿಪಡಿಸಿರುವ ಮಾನದಂಡಗಳು, ಮಳೆ ಕೊರತೆ, ಒಣಹವೆಯ ಅವಧಿ, ಬಿತ್ತನೆ ಪ್ರಮಾಣ, ಬೆಳೆ ಪರಿಸ್ಥಿತಿ, ಮಣ್ಣಿನ ತೇವಾಂಶ, ಅಂತರ್ಜಲ ಹಾಗೂ ಜಲಾಶಯಗಳ ನೀರಿನ ಲಭ್ಯತೆ ಸೇರಿದಂತೆ ವೈಜ್ಞಾನಿಕ ಅಂಶಗಳ ಆಧಾರದ ಮೇಲೆಯೇ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುತ್ತಿದೆ ಎಂದು ಹೇಳಿದರು. 101ರಿಂದ 124, ಇದೀಗ 177ರತ್ತ : ಆಗಸ್ಟ್‌ನಲ್ಲಿ ಮೊದಲ ಹಂತದಲ್ಲಿ 101 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿ–ತ್ತು. ಅವುಗಳಲ್ಲಿ 89 ತಾಲೂಕುಗಳು ತೀವ್ರ ಬರಪೀಡಿತ ಹಾಗೂ 12 ತಾಲೂಕುಗಳು ಮಧ್ಯಮ ಬರಪೀಡಿತ ಎಂದು ವರ್ಗೀಕರಿಸಲಾಗಿ–ತ್ತು. ಬಳಿಕ ಸೆಪ್ಟೆಂಬರ್‌ನಲ್ಲಿ ಮತ್ತೊಂದು 23 ತಾಲ್ಲೂಕುಗಳನ್ನು ಸೇ–ರಿಸಲಾಗಿದ್ದು, ಒಟ್ಟು ಸಂಖ್ಯೆ 124ಕ್ಕೆ ಏರಿದೆ. ಈ 23 ತಾಲ್ಲೂಕುಗಳ ಪೈಕಿ 21 ತೀವ್ರ ಹಾಗೂ ಎರಡು ಮಧ್ಯಮ ಬರಪೀಡಿತ ತಾಲ್ಲೂಕುಗಳಾಗಿವೆ. ಇದೀಗ ಮೂರನೇ ಹಂತದ ಪರಿಶೀಲನೆ ಬಳಿಕ ಮತ್ತಷ್ಟು ತಾಲ್ಲೂಕುಗಳನ್ನು ಪಟ್ಟಿಗೆ ಸೇರಿಸುವುದಾಗಿ ಸರ್ಕಾರ ತಿಳಿಸಿದೆ. ಸೆಪ್ಟೆಂಬರ್ 20ರ ವೇಳೆಗೆ ಪರಮೇಶ್ವರ್ ಅವರು ರಾಜ್ಯದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳು ಅಂತಿಮವಾಗಿ ಬರಪೀಡಿತ ಪಟ್ಟಿಗೆ ಸೇರುವ ಸಾಧ್ಯತೆ ಇದೆ ಎಂದು ಹೇಳಿದ್ದರು. ಹೀಗಾಗಿ ಇಂದಿನ ಘೋಷಣೆ ಅಂತಿಮ ಪಟ್ಟಿಯಾಗದೆ, ಬರದ ಪರಿಸ್ಥಿತಿಯ ಆಧಾರದ ಮೇಲೆ ಮುಂದಿನ ಹಂತಗಳಲ್ಲೂ ಪರಿಶೀಲನೆ ಮುಂದುವರಿಯುವ ಸಾಧ್ಯತೆ ಇದೆ.18 ಸಾವಿರ ಕೋಟಿ ನಷ್ಟದ ವರದಿ : ಮೊದಲ ಹಂತದಲ್ಲಿ ಬರಪೀಡಿತ ಎಂದು ಗುರುತಿಸಲಾದ 101 ತಾಲ್ಲೂಕುಗಳಲ್ಲಿ ಬೆಳೆ ಹಾಗೂ ಸಂಬಂಧಿತ ಆರ್ಥಿಕ ನಷ್ಟವನ್ನು ಸುಮಾರು 18 ಸಾವಿರ ಕೋಟಿ ಎಂದು ಅಂದಾಜಿಸಲಾಗಿದೆ. ಈ ಆಧಾರದ ಮೇಲೆ ಕೇಂದ್ರದಿಂದ ಸುಮಾರು 3,500 ಕೋಟಿ ಪರಿಹಾರ ಕೋರಿ ರಾಜ್ಯ ಸರ್ಕಾರ ಮನವಿ ಸಲ್ಲಿಸಿದೆ. ಮುಂದಿನ ಹಂತಗಳಲ್ಲಿ ಸೇರ್ಪಡೆಯಾಗುವ ತಾಲೂಕುಗಳ ನಷ್ಟದ ವಿವರಗಳನ್ನು ಒಳಗೊಂಡಂತೆ ಹೆಚ್ಚುವರಿ ಮನವಿಗಳನ್ನು ಸಲ್ಲಿಸುವುದಾಗಿ ಸರ್ಕಾರ ಈಗಾಗಲೇ ತಿಳಿಸಿದೆ. ಹಿಂದಿನ ಬರದ ಸಂದರ್ಭದಲ್ಲೂ ಕರ್ನಾಟಕವು ದೊಡ್ಡ ಪ್ರಮಾಣದ ಪರಿಹಾರಕ್ಕೆ ಮನವಿ ಸಲ್ಲಿಸಿತ್ತು. ಆದರೆ ನಿರೀಕ್ಷಿತ ಪ್ರಮಾಣದ ನೆರವು ದೊರೆಯಲಿಲ್ಲ ಎಂದು ಪರಮೇಶ್ವರ್ ವಿಧಾನ ಪರಿಷತ್‌ನಲ್ಲಿ ನೆನಪಿಸಿದರು. ಹಿಂದಿನ ಬಾರಿ ರಾಜ್ಯವು ಸುಮಾರು 39 ಸಾವಿರ ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಿ 18 ಸಾವಿರ ಕೋಟಿ ರೂ. ಪರಿಹಾರ ಕೇಳಿದ್ದರೂ, ಸುಮಾರು 3,400, 3,500 ಕೋಟಿ ರೂ. ಮಾತ್ರ ದೊರೆತಿತ್ತು ಎಂದು ಸರ್ಕಾರದ ಹೇಳಿಕೆಗಳನ್ನು ವರದಿಗಳು ದಾಖಲಿಸಿವೆ.

ಕಾರುಣ್ಯಾಶ್ರಮದಲ್ಲಿ ಹಂಪಿಯ ಶಿವಾನಂದ ಯೋಗಾಶ್ರಮದ ಸದಾಶಿವಯೋಗಿ ಅವರ 5ನೇ ವರ್ಷದ ಗುರು ಸ್ಮರಣೆ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಬೂದಿವಾಳ ಕ್ಯಾಂಪಿನ ಸದಾಶಿವಯೋಗಿ ವಿದ್ಯಾರ್ಥಿಗಳು ಸದ್ಭಕ್ತರುಗಳ ವತಿಯಿಂದ ವಿಜಯನಗರ ಸಾಮ್ರಾಜ್ಯದ ಹಂಪಿಯ ಶಿವಾನಂದ ಯೋಗಾಶ್ರಮದ ಪರಮಪೂಜ್ಯಶ್ರೀ ಸದಾಶಿವಯೋಗಿ ಅವರ ಐದನೇ ವರ್ಷದ ಗುರು ಸ್ಮರಣೆ ಕಾರ್ಯಕ್ರಮವನ್ನು ಪ್ರತಿ ವರ್ಷದ ಪದ್ಧತಿಯಂತೆ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವಿರುದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಇಡೀ ದಿನದ ಮಹಾಪ್ರಸಾದ ಸೇವೆಯನ್ನು ಸಲ್ಲಿಸಿ.

ಹಣ್ಣು ಹಂಪಲುಗಳನ್ನು ವಿತ–ರಿಸುವ ಮೂಲಕ ಪರಮಪೂಜ್ಯ ಶ್ರೀ ಸದಾಶಿವ ಯೋಗಿಯವರ ಸಂದೇಶಗಳನ್ನು ಪಠಣ ಮಾಡುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ



ಹಿರೇಮಠ ಮಾತನಾಡಿ ಹಂಪಿಯ ಶ್ರೀ ಸದಾಶಿವಯೋಗಿ ಇವರು ಲೋಕಕಲ್ಯಾಣ–ಕ್ಕಾಗಿ ಸಮಸ್ತ ಮಾನವ ಕುಲದ ಉದ್ಧಾರಕ್ಕಾಗಿ ಜೀವ ಸಮಾಧಿ ಯಾಗುವ ಮೂಲಕ ಇತಿಹಾಸವನ್ನೇ ಸೃಷ್ಟಿಸಿದ್ದಾರೆ. ಇಂತಹ ಪರಮಪೂಜ್ಯರ ಗುರು ಸ್ಮರಣೆ ಕಾರ್ಯಕ್ರಮ ನಮ್ಮ ಸಿಂಧನೂರು ತಾಲೂಕಿನ ಬುಧವಾರ ಕ್ಯಾಂಪಿನ ಸಮಸ್ತ ವಿದ್ಯಾರ್ಥಿಗಳು ಮತ್ತು ತಾಯಂದಿರು ಪ್ರತಿವರ್ಷವೂ ಕೂಡ ಇವರ ಸ್ಮರಣೆಯನ್ನು ಕಾರುಣ್ಯ ಆಶ್ರಮದ ಸೇವೆಯನ್ನು ಮಾಡುವ ಮೂಲಕ ಆಶ್ರಯದಾತರುಗಳಿಗೆ ಆತ್ಮೀಯತೆಯ ಪ್ರೀತಿಯ ಮಮತೆಯನ್ನು ಧಾರೆಯೆರೆಯುವ ಮೂಲಕ ಆಚರಣೆ ಮಾಡಿ ಪೂಜ್ಯರ ಭಕ್ತಿಯ ಪ್ರೀತಿಗೆ ಪಾತ್ರವಾಗಿದ್ದಾರೆ. ಈ ವಿದ್ಯಾರ್ಥಿಗಳು ಕಾರುಣ್ಯ ಆಶ್ರಮದ ದತ್ತಿ ಧರ್ಮದರ್ಶಿಗಳಾಗಿ ಕಾರುಣ್ಯ ಕುಟುಂಬದ ನಿರಂತರ ಕರುಣಾಮಯಿಗಳಾಗಿದ್ದಾರೆ.

ಶ್ರೀ ಸದಾಶಿವಯೋಗಿಯವರು ಯೋಗ ನಿಷ್ಠೆಯನ್ನು ಪಾಲನೆ ಮಾಡುತ್ತಾ ಯೋಗ ನಿಷ್ಠೆ ಪ್ರಾಣಾಯಾಮದ ಮೂಲಕ ಜ್ಞಾನಕ್ಕಿಂತ ಮಿಗಿಲಾದದ್ದಿಲ್ಲ ಪ್ರಾಣಕ್ಕಿಂತ ಅತಿಶಯವಾದದ್ದು ಏನು ಇಲ್ಲ ಎನ್ನುವ ಹಲವಾರು ಸಂದೇಶಗಳನ್ನು ಈ ವಿದ್ಯಾರ್ಥಿಗಳ ಮೂಲಕ ಸಮಾಜಕ್ಕೆ ಸಾರುತ್ತಿದ್ದಾರೆ. ಇಂತಹ ತಪಸ್ವಿಗಳ ಕಾರ್ಯಕ್ರಮವನ್ನು ಕಾರುಣ್ಯ ಕುಟುಂಬದಲ್ಲಿ ನಡೆಯುತ್ತಿರುವುದು ನಾವು ಅದರಲ್ಲಿ ಭಾಗಿಯಾಗುತ್ತಿರುವುದು ನಮ್ಮ ಜನ್ಮ ಸಾರ್ಥಕವಾಗಿದೆ ಎಂದೆನಿಸುತ್ತದೆ ಎಂದು. ಶ್ರೀ ಸದಾಶಿವಯೋಗಿಯವರ ಹಲವಾರು ಸಂದೇಶಗಳನ್ನು ಆಶ್ರಯದಾತರುಗಳ ವಾಣಿಯಿಂದ ನುಡಿಸುವ ಮೂಲಕ ಅರ್ಥ–ಪೂರ್ಣವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಅನಂತಲಕ್ಷ್ಮಿ ಬೂದಿವಾಳ ಕ್ಯಾಂಪ್. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ.ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ಡೋಟಿಹಾಳ. ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಬೂದಿವಾಳ ಕ್ಯಾಂಪಿನ ಶ್ರೀ ಸದಾಶಿವಯೋಗಿಯ ವಿದ್ಯಾರ್ಥಿಗಳು ಸದ್ಭಕ್ತರು ಉಪಸ್ಥಿತರಿದ್ದರು.

ಉಪವಾಸ ನಿರತ ಹೋರಾಟಗಾರ ಅಸ್ವಸ್ಥ

ಆರೋಗ್ಯದ ದೃಷ್ಟಿಯಿಂದ ಉಪವಾಸ ಅಂತ್ಯ ಬರ ಘೋಷಣೆ ಬೇಡಿಕೆಯಿಂದ ಹಿಂದೆ ಸರಿಯುವುದಿಲ್ಲ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದ ಸಮೀಪದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರಜ್ಞಾವಂತ ಪ್ರಗತಿಪರ ಪ್ರಜಾಪ್ರಭುಗಳ ಹೋರಾಟ ವೇದಿಕೆ ವತಿಯಿಂದ ಕುಷ್ಟಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸುವಂತೆ ಒತ್ತಾಯಿಸಿ ನಡೆಯುತ್ತಿರುವ ಮೌನ ಪ್ರತಿಭಟನೆ ಹಾಗೂ ಉಪವಾಸ ಸತ್ಯಾಗ್ರಹದ ವೇಳೆ ಹೋರಾಟ ವೇದಿಕೆ ಮುಖಂಡ ಬಸವರಾಜ ಗಾಣಿಗೇರ ಅವರ ಆರೋಗ್ಯದಲ್ಲಿ ಏರುಪೇರಾಗಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು.

ಗಾಣಿಗೇರ ಅವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಅಶೋಕ ಶಿಗ್ಗಾಂವಿ, ಸಿಪಿಐ ವಿಶ್ವನಾಥ ಹಿರೇಗೌಡರ್ ಹಾಗೂ ಪಿಎಸ್‌ಐ ಹನಮಂತಪ್ಪ ತಳವಾರ ಅವರು ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಪಡೆಯುವಂತೆ ಮನವಿ ಮಾಡಿದರು. ಬಳಿಕ ಬಸವರಾಜ ಗಾಣಿಗೇರ ಅವರನ್ನು ತಕ್ಷಣ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ಚಿಕಿತ್ಸೆಯ ನಂತರ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿತು.

ಮಧ್ಯಾಹ್ನ ತಹಸೀಲ್ದಾರ್ ಅಶೋಕ ಶಿಗ್ಗಾಂವಿ, ರೈತ ಮುಖಂಡ ದೇವೇಂದ್ರಪ್ಪ ಬಳೂಟಗಿ ಹಾಗೂ ಸಿಪಿಐ ವಿಶ್ವನಾಥ ಹಿರೇಗೌಡರ್ ಅವರು ಎಳನೀರು ಕುಡಿಸುವ ಮೂಲಕ ಬಸವರಾಜ ಗಾಣಿಗೇರ ಅವರ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಅವರು ದೂರವಾಣಿ ಮೂಲಕ ಹೋರಾಟಗಾರರೊಂದಿಗೆ ಮಾತನಾಡಿ, "ಸರ್ಕಾರದ ಮಟ್ಟದಲ್ಲಿ ಮಾಡಬೇಕಾದ ಕೆಲಸಗಳನ್ನು ಮಾಡಲಾಗಿದೆ. ಇನ್ನೆರಡು ದಿನಗಳಲ್ಲಿ ಕುಷ್ಟಗಿ ತಾಲೂಕು ಬರಪೀಡಿತ ತಾಲೂಕುಗಳ ಪಟ್ಟಿಗೆ ಸೇರ್ಪಡೆಯಾಗಬಹುದು. ಹೋರಾಟ ಮಾಡುವುದು ನಿಮ್ಮ ಹಕ್ಕು. ಆದರೆ ಆರೋಗ್ಯದ ದೃಷ್ಟಿಯಿಂದ ಉಪವಾಸ ಸತ್ಯಾಗ್ರಹವನ್ನು ಕೈಬಿಡಬೇಕು" ಎಂದು ಮನವಿ ಮಾಡಿದರು.

ಆರೋಗ್ಯದ ಕಾರಣದಿಂದ ಉಪವಾಸ



ಸತ್ಯಾಗ್ರಹವನ್ನು ಅಂತ್ಯಗೊಳಿಸಿದ್ದರೂ, ಕುಷ್ಟಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಬೇಕೆಂಬ ಬೇಡಿಕೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಹೋರಾಟಗಾರರು ಸ್ಪಷ್ಟಪಡಿಸಿದರು. ಹೋರಾಟದಲ್ಲಿ ಕಿರಣಜ್ಯೋತಿ, ಮಲ್ಲಿಕಾರ್ಜುನ ದೋಟಿಹಾಳ, ರಮೇಶ ಮೇಲಿನಮನಿ, ದೇವೇಂದ್ರಪ್ಪ ಬಳೂಟಗಿ, ನಿಂಗಪ್ಪ ಜಿಗೇರಿ, ಕೇದಾರನಾಥ ತುರಕಾಣಿ, ಬಸವರಾಜ ತಿಮ್ಮಾಪುರ, ರಾಘವೇಂದ್ರ, ಸಂಗಮ್ಮ ಗುಳಗೌಡ್ರ, ಅಕ್ಕಮ್ಮ ಮರೇಗೌಡರ ಸೇ–ರಿದಂತೆ ಹಲವರು ಉಪಸ್ಥಿತರಿದ್ದರು.

ಆಧುನಿಕತೆಯ ನಡುವೆಯೂ ಸಾಂಪ್ರದಾಯಿಕ ರಂಗೋಲಿ ಕಲೆ ಉಳಿಸಿ ಬೆಳೆಸಿ: ಹೊಸಕೋಟೆ ಜಗದೀಶ ಕರೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ರಂಗೋಲಿ ಕಲೆಯು ಭಾರತದ ಪುರಾತನ ಜಾನಪದ ಕಲೆಯಾಗಿದ್ದು, ಅದರ ಪರಂಪರೆಯನ್ನು ಉಳಿಸಿಕೊಂಡು ಆಧ–ನಿಕ ಹಾಗೂ ನವೀನ ವಿನ್ಯಾಸಗಳ ಮೂಲಕ ಈ ಕಲೆಯನ್ನು ಮತ್ತಷ್ಟು ಬೆಳೆಸಬೇಕಾದ ಅಗತ್ಯವಿದೆ ಎಂದು ವೀರಶೈವ ಲಿಂಗಾಯತ ಮಹಾವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಹೇಳಿದರು.

ಪಟ್ಟಣದ ಸಕ್ಕರೆ ಕಾರ್ಖಾನೆ ಪ್ರದೇಶದ ಹಳೆ ಹೌಸಿಂಗ್ ಬೋರ್ಡ್ ಕಾಲನಿಯ ಶ್ರೀ ವಿನಾಯಕ ಮಹಾಮಂಡಳಿಯಿಂದ ಭಾನುವಾರ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.ರಂಗೋಲಿ ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಸೃಜನಶೀಲತೆಯ ಪ್ರತೀಕವಾಗಿದೆ. ಹಿಂದಿನ ಕಾಲದಿಂದಲೂ ಮನೆಗಳ ಮುಂದೆ ರಂಗೋಲಿ ಬಿಡಿಸುವ



ಮೂಲಕ ಶುಭ, ಸೌಂದರ್ಯ ಹಾಗೂ ಸಂಸ್ಕೃತಿಯನ್ನು ವ್ಯಕ್ತಪಡಿಸಲಾಗುತ್ತಿದೆ. ಇಂತಹ ಸಾಂಪ್ರದಾಯಿಕ ಕಲೆಗಳು ಮುಂದಿನ ಪೀಳಿಗೆಯ ಮಕ್ಕಳಿಗೆ ಪರಿಚಯವಾಗುವಂತೆ ಬಾಲ್ಯದಿಂದಲೇ ರಂಗೋಲಿ ಕಲೆಯನ್ನು ಕಲಿಸಬೇಕು ಎಂದರು. ಇಂದಿನ ಆಧುನಿಕ ಜೀವನಶೈಲಿಯ ನಡುವೆಯೂ ರಂಗೋಲಿ ಕಲೆಯ ಮೇಲಿನ ಆಸಕ್ತಿ ಕಡಿಮೆಯಾಗದಂತೆ ವಿವಿಧ ರೀತಿಯ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಮಹಿಳೆಯರು ಹಾಗೂ ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು. ಸಾಂಪ್ರದಾಯಿಕ ವಿನ್ಯಾಸಗಳ ಜತೆಗೆ ಹೊಸ ಆಲೋಚನೆ, ಬಣ್ಣಗಳ ಸಂಯೋಜನೆ ಹಾಗೂ ವಿಭಿನ್ನ ವಿನ್ಯಾಸಗಳನ್ನು ಅಳವಡಿಸಿಕೊಂಡು ರಂಗೋಲಿ ಕಲೆಯನ್ನು ಮತ್ತಷ್ಟು ಜನಪ್ರಿಯಗೊಳಿಸಬೇಕು ಎಂದು ಅವರು ಆಶಿಸಿದರು. ರಂಗೋಲಿ ಸ್ಪರ್ಧೆಯಲ್ಲಿ ರೇಷ್ಮಾ ಪ್ರಥ–ಮ, ಶ್ರೀಲೇಖಾ ದ್ವಿತೀಯ ಹಾಗೂ ಅನುಶ್ರೀ ತೃತೀಯ ಬಹುಮಾನ ಪಡೆದುಕೊಂಡರು. ವಾಲ್ಮೀಕಿ ಸಮಾಜದ ಮುಖಂಡ ಪಿ. ವೀರೇಶ್ ಅವರು ವಿಜೇತ–ರಿಗೆ ಬಹುಮಾನಗಳನ್ನು ಪ್ರಾಯೋಜಿಸಿದ್ದರು. ಈ ಸಂದರ್ಭದಲ್ಲಿ ಚಿತ್ರಕಲೆ ಶಿಕ್ಷಕ ರಾಮಚಂದ್ರ ಚಿತ್ರಗಾರ, ಪ್ರಮುಖರಾದ ಎಚ್. ಶಬ್ಬಿರ್ ಸೇರಿದಂತೆ ಶ್ರೀ ವಿನಾಯಕ ಮಹಾಮಂಡಳಿಯ ಪದಾಧಿಕಾರಿಗಳು ಹಾಗೂ ಸ್ಥಳೀಯ ಮಹಿಳೆಯರು ಉಪಸ್ಥಿತರಿದ್ದರು.

ಕೆಪಿಎಸ್‌ಸಿ ಹಗರಣದ ತನಿಖೆ ಡಿಜಿಪಿ ಅಲೋಕ್‌ಕುಮಾರ್ ನೇತೃತ್ವದಲ್ಲಿ ಎಸ್‌ಐಟಿ ರಚನೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕೆಪಿಎಸ್‌ಸಿ ನೇಮಕಾತಿ ಹಗರಣಗಳ ಸಂಬಂಧ ಹೊಸದಾಗಿ ತನಿಖೆ ನಡೆಸಲು ಡಿಜಿಪಿ ಅಲೋಕ್‌ಕುಮಾರ್ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿದೆ.ಈ ವಿಶೇಷ ತನಿಖಾ ತಂಡ (ಎಸ್‌ಐಟಿ) ತನ್ನ ಕಾರ್ಯವನ್ನು ಆರಂಭಿಸಿದ್ದು ಇಂದು ಅಥವಾ ನಾಳೆ ಈ ಸಂಬಂಧ ಸಭೆ ನಡೆಸಲಿದೆ.

ನೇಮಕಾತಿ ಅಕ್ರಮ ಸಂಬಂಧ ಕಡತಗಳ ಪರಿಶೀಲನೆ, ಸಿಐಡಿ ದಾಖಲೆಗಳು, ಸಾಕ್ಷ್ಯವನ್ನು ಪರಿಶೀಲಿಸುವುದಲ್ಲದೇ ಈಗಾಗಲೇ ಸಿಐಡಿ ವಿಚಾರಣೆ ಎದುರಿಸಿರುವ ಎಲ್ಲ–ರಿಗೂ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ಸೂಚಿಸುವ ಸಾಧ್ಯತೆ ಇದೆ. ಅಭ್ಯರ್ಥಿಗಳು, ಮಧ್ಯವರ್ತಿಗಳು, ಕೆಪಿ–ಎಸ್‌ಸಿ ಸಿಬ್ಬಂದಿ ಹಾಗೂ ಸದಸ್ಯರ ವಿಚಾರಣೆಯನ್ನು ಎಸ್‌ಐಟಿ ನಡೆಸಲಿದೆ.

ಕಾರಾಗೃಹಗಳ ಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ರಚಿಸಲಾಗಿರುವ ಎಸ್‌ಐಟಿ ತಂಡದಲ್ಲಿ ರಾಜ್ಯದ ವಿಧಿ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಾದ ಐಜಿಪಿ ಡಾ.ದಿವ್ಯಾ ಗೋಪಿನಾಥ್, ಉಪಪೊಲೀಸ್ ಆಯುಕ್ತ ಅನೂಪ್ ಶೆಟ್ಟಿ , ಎಸ್‌ಪಿ ಕುಶಾಲ್ ಚೌಕ್ಸೆ ಮತ್ತು ಉಪ ಪೊಲೀಸ್ ಆಯುಕ್ತೆ ಕ್ಷಮಾ ಮಿಶ್ರಾ ಅವರು ಸದಸ್ಯರಾಗಿರುತ್ತಾರೆ.



ಸಿಐಡಿ ವರದಿ ಸಲ್ಲಿಕೆ: ಎಸ್‌ಐಟಿ ರಚನೆ ಬೆನ್ನಲ್ಲೇ ಸರ್ಕಾರಕ್ಕೆ ಸಿಐಡಿ ತನಿಖಾ ವರದಿ ಸಲ್ಲಿಸಿದೆ. ಆ ವರದಿಯಲ್ಲಿ ಕೆಪಿ–ಎಸ್‌ಸಿ ಹಗರಣದ ಕುರಿತು ಸಿಐಡಿ ಎಳೆ–ಎಳೆಯಾಗಿ ಮಾಹಿತಿ ಬಿಚ್ಚಿಟ್ಟಿದೆ. ಸಿಐಡಿ ಸಲ್ಲಿಸಿರುವ ತನಿಖಾ ವರದಿಯಲ್ಲಿ ಹಣ ವರ್ಗಾವಣೆ, ಹುದ್ದೆಗಳ ಮಾರಾಟದ ಬಗ್ಗೆ ವಿಸ್ತಾರವಾಗಿ ಉಲ್ಲೇಖಿಸಲಾಗಿದೆ. ಪಶುವೈದ್ಯಾಧಿಕಾರಿ ಹುದ್ದೆ ಅಕ್ರಮ ನೇಮಕಾತಿ ಸಂಬಂಧ ಸಿಐಡಿ ಈವರೆಗೂ 92 ಲಕ್ಷ ರೂ. ಜಪ್ತಿ ಮಾಡಿದೆ.

ಭಾಲ್ಕಿ ಪಟ್ಟಣದ ಓಂ ಲಕೀ ಸೌಹಾರ್ದ ಸಹಕಾರಿ ಬ್ಯಾಂಕ್, ಕೋಟಕ್ ಮಹೀಂದ್ರಾ ಬ್ಯಾಂಕ್ ಖಾತೆಗಳಿಗೆ 92 ಲಕ್ಷ ರೂ. ಹಣ ಜಮೆಯಾಗಿರುವುದು ಸಿಐಡಿ ತನಿಖೆಯಲ್ಲಿ ಪತ್ತೆಯಾಗಿದೆ. ಕನ್ನಾಳೆ ಸೂಚನೆಯಂತೆ ಐವರು ಅಭ್ಯರ್ಥಿಗಳು ಹಣ ವರ್ಗಾಯಿಸಿದ್ದರು. ಸಿದ್ಧಾರ್ಥ್ 20 ಲಕ್ಷ ರೂ, ವಿ.ಬಸವರಾಜ್ 27 ಲಕ್ಷ , ಮಹೇಂದ್ರ 25 ಲಕ್ಷ ಹಾಗೂ ನಿರಂಜನ್ 14 ಲಕ್ಷ ರೂ. ಹಣವನ್ನ ಖಾತೆಗೆ ಜಮೆ ಮಾಡಿದ್ದರು. ಅಭ್ಯರ್ಥಿಗಳಾದ ಕಿರಣ್ ಗೌಡ 10 ಲಕ್ಷ, ಸಲೀಂ 30 ಲಕ್ಷ, ಮೊಹಮದ್ ಸುಹೈಲ್ 20 ಲಕ್ಷ ನಗದು ರೂಪದಲ್ಲಿ ಹಣ ನೀಡಿದ್ದರು ಎಂಬುವುದು ಸಿಐಡಿ ತನಿಖೆಯಲ್ಲಿ ಗೊತ್ತಾಗಿದೆ.

ಇನ್ನು ಅಭ್ಯರ್ಥಿಗಳು, ಮಧ್ಯವರ್ತಿಗಳು, ಕನ್ನಾಳೆ ವಾಟ್ಸಾಪ್‌ನಲ್ಲಿ ಸಂವಹನ ನಡೆಸಿದ್ದಾರೆ. ಪರೀಕ್ಷೆಗೆ ಮೊದಲು ಗ್ಯಾಂಗ್ ಅಭ್ಯರ್ಥಿಗಳಿಗೆ 60–80 ಪ್ರಶ್ನೆ ನೀಡಿತ್ತು. 5 ಅಭ್ಯರ್ಥಿಗಳಿಗೆ ಪ್ರಶ್ನೆಗಳಿಗೆ ಉತ್ತರಿಸುವ ಅಭ್ಯಾಸ ಮಾಡಿಸಲಾಗಿತ್ತು. ಕನ್ನಾಳೆ ಮಧ್ಯವರ್ತಿ ಪವನ್ ಮೂಲಕ ವಿದ್ಯಾರ್ಥಿಗಳನ್ನು ಸಂಪರ್ಕಿಸಿದ್ದ. ಸಿದ್ದಾಥ–ರ್, ರಾಜ್ ಮೊಹಮದ್, ಬಸವರಾಜ್, ಮಹೇಂದ್ರ, ನಿರಂಜನ್ ಸಂಪರ್ಕ ಮಾಡಿದ್ದ. ಅಲ್ಲದೇ ವಿನೋದ್, ಕಿರಣ್ ಗೌಡ, ಚೈತ್ರಾ ನೇರವಾಗಿ ಸಂಪರ್ಕಿಸಿದ್ದ ಎಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಸಂಬಂಧ ಸಿಐಡಿ ಒಟ್ಟು 40 ಅಭ್ಯರ್ಥಿಗಳನ್ನು ವಿಚಾರಣೆ ನಡೆಸಿದೆ.

ಪ್ರಕರಣ ಸಂಬಂಧ 22 ಲಕ್ಷ ಮೌಲ್ಯದ ವಜ್ರದ ಹಾರವನ್ನು ಸಿಐಡಿ ಸೀಜ್ ಮಾಡಿದೆ. ಜ್ಞಾನೇಂದ್ರ ತನ್ನ ಸ್ನೇಹಿತೆಗಾಗಿ ಚಿನ್ನಾಭರಣ ಖರೀದಿಸಿದ್ದ. ಇನ್ನು ಮಧ್ಯವರ್ತಿ ಬಸವರಾಜ್ ಕನ್ನಾಳೆಯಿಂದ 5.76 ಲಕ್ಷ ರೂ. ಹಣವನ್ನು ಸೀಜ್ ಮಾಡಲಾಗಿದೆ. ಕನ್ನಾಳೆ ಮತ್ತು ಪತ್ನಿ ಖಾತೆಯಲ್ಲಿದ್ದ 71.18 ಲಕ್ಷ ರೂ. ಹಣವನ್ನು ಫ್ರೀಜ್ ಮಾಡಲಾಗಿದೆ.ಒಟ್ಟಾರೆ ಸಿಐಡಿ 2 ಕೋಟಿ ಹಣವನ್ನು ಜಪ್ತಿ ಮಾಡಿದೆ.

ಕುಷ್ಟಗಿ ಬರ ಘೋಷಣೆಗೆ ಕೊಪ್ಪಳದತ್ತ ಎರಡನೇ ದಿನದ ಪಾದಯಾತ್ರೆ

ಮಳೆ ಕೊರತೆ ಬೆಳೆಹಾನಿಯಿಂದ ರೈತರು ಸಂಕಷ್ಟ ಬರಪೀಡಿತ ತಾಲೂಕು ಘೋಷಣೆಗೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಕುಷ್ಟಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ ರೈತ–ರಿಗೆ ಅಗತ್ಯ ಪರಿಹಾರ ಹಾಗೂ ನೆರವು ನೀಡುವಂತೆ ಆಗ್ರಹಿಸಿ ತಾವರಗೇರಾದಿಂದ ಕೊಪ್ಪಳ ಜಿಲ್ಲಾಧಿಕಾರಿ ಕಚೇರಿವರೆಗೆ ಆರಂಭಿಸಿರುವ ರೈತರ ಪಾದಯಾತ್ರೆ ಎರಡನೇ ದಿನವೂ ಮುಂದುವರಿಯಿತು.

ತಾವರಗೇರಾ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಆರಂಭವಾದ ಪಾದಯಾತ್ರೆ ನವಲಹಳ್ಳಿ, ಹಿರೇಮನ್ನಾಪುರ ಮಾರ್ಗವಾಗಿ ಕುಷ್ಟಗಿ ತಲುಪಿತ್ತು. ಕುಷ್ಟಗಿಯಲ್ಲಿ ವಾಸ್ತವ್ಯ ಹೂಡಿದ್ದ ಹೋರಾಟಗಾರರು ಮರುದಿನ ಬೆಳಗ್ಗೆ ತಹಶೀಲ್ದಾರ್ ಕಚೇರಿ ಸಮೀಪ ಹೋರಾಟಗಾರ ಬಸವರಾಜ ಗಾಣಿಗೇರ ಅವರನ್ನು ಭೇಟಿ ಮಾಡಿದರು.

ನಂತರ ಘೋಷಣೆಗಳನ್ನು ಕೂಗುತ್ತಾ ಬಸವೇಶ್ವರ ವೃತ್ತಕ್ಕೆ ಆಗಮಿಸಿದ ಹೋರಾಟಗಾರರು ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುಮಾರು ಒಂದು ಗಂಟೆ ಪ್ರತಿಭಟನೆ ನಡೆಸಿದರು. ಬಳಿಕ ಪಾದಯಾತ್ರೆಯನ್ನು ಮುಂದುವರಿಸಿ ಬೇವೂರು, ವಾಸ್ತವ್ಯ ಮಾಡುವರು ನಾಳೆ ದಿವಸ ಇರಕಲಗಡ ಮಾರ್ಗವಾಗಿ ಕೊಪ್ಪಳದತ್ತ ಸಾಗುವರು



ಈ ಸಂದರ್ಭದಲ್ಲಿ ಮಾತನಾಡಿದ ನಿಡಶೇಸಿ ಮಠದ ಅಭಿನವ ಕರಿಬಸವ ಶ್ರೀಗಳು, "ಮಳೆ ಕೊರತೆ ಹಾಗೂ ಬೆಳೆಹಾನಿಯಿಂದ ಕುಷ್ಟಗಿ ತಾಲೂಕಿನ ರೈತರು ಸಂಕಷ್ಟದಲ್ಲಿದ್ದಾರೆ. ರೈತರ ಕಷ್ಟವನ್ನು ಸರ್ಕಾರ ಅರಿತುಕೊಳ್ಳಬೇಕು. ರೈತರ ಬದುಕನ್ನು ಗಮನದಲ್ಲಿಟ್ಟುಕೊಂಡು ಕುಷ್ಟಗಿ ತಾಲೂಕನ್ನು ಬರಪೀಡಿತ ಎಂದು ಘೋಷಿಸಿ ಅಗತ್ಯ ನೆರವು ನೀಡಬೇಕು" ಎಂದು ಆಗ್ರಹಿಸಿದರು. ಕೊಪ್ಪಳ ಜಿಲ್ಲಾಧಿಕಾರಿ ಕಚೇ–ರಿಗೆ ಪಾದಯಾತ್ರೆ ತಲುಪಿದ ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಹೋರಾಟಗಾರರು ತಿಳಿಸಿದರು.

ಪಾದಯಾತ್ರೆಯಲ್ಲಿ ಅಭಿನವ ಕರಿಬಸವ ಶ್ರೀಗಳು, ಮಹೇಶ್ವರಸ್ವಾಮಿ ಹಿರೇಮಠ, ಸಿದ್ಧಾರೂಢ ಶ್ರೀಗಳು, ರವಿಕುಮಾರ ಹಿರೇಮಠ, ದೇವೇಂದ್ರಪ್ಪ ಬಳೂಟಗಿ, ನಜೀರಸಾಬ ಮೂಲಿಮನಿ, ಬಸವರಾಜ ಹಳ್ಳೂರು, ಉಮೇಶ ಮಂಗಳೂರು, ಮಹಾಂತಯ್ಯ ಅರಳಿಮಠ ಮಲ್ಲಿಕಾರ್ಜುನ ದೋಟಿಹಾಳ, ರಮೇಶ ಮೇಲಿನಮನಿ, ಕಿರಣ ಜ್ಯೋತಿ, ಸೇರಿದಂತೆ ರೈತರು, ಮಹಿಳೆಯರು, ಯುವಕರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

ವಚನ ದರ್ಶನ

ಅರಗು ತಿಂದು ಕರಗುವ ದೈವವ, ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?ಸಹಜ ಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ

ವಿಶ್ವಗುರು ಬಸವಣ್ಣನವರ ಪ್ರಸಿದ್ಧ ವಚನದ ಸಾಲು. ಅರಗ ಅರಗು ತಿಂದು ಕರಗುವ, ಅಂದರೆ ಅಸ್ಥಿರವಾದ ಮತ್ತು ಪ್ರಕೃತಿಯ ಮೂರ್ತರೂಪದ ಅಲ್ಪ ದೈವಗಳನ್ನು ಅಥವಾ ಮೂರ್ತಿ ಪೂಜೆಯನ್ನು ಪ್ರಶ್ನಿಸುವ ವಚನವಿದು. ಇದರ ಸಂಪೂರ್ಣ ವಚನ ಮತ್ತು ಭಾವಾರ್ಥ ಕೆಳಗಿದೆ.

ಅರಗನ್ನು ಹೊಂದಿ ಕರಗುವಂತಹ ಬೆಂಕಿಗೆ. ಮುದ್ದೆಯಾಗುವ ಅಡಚಣೆ ಬಂದಾಗ ಮಾರಲು ಬರುವ ಅಂಜಿಸಿ ಅಂಜಿಸಿದರೆ ಮುಗಿಯಲು ಸಾಧ್ಯವಾಗುವ ದೇವತೆಗಳಿಗೆ ಯೋಗ್ಯ ಎಂದು ಎನ್ನಬಲ್ಲವೇ ಐಕ್ಯಕ್ಕೆ ಕಾರಣನು ಶ್ರೇಷ್ಠ ಮನೋಧರ್ಮಿಯು ಆದ ಕೂಡಲಸಂಗಮದೇವ ಒಬ್ಬನೇ ದೇವನು.

ಅರಗ ತಿಂದವರ ಕರಗು" ಎಂಬುದು ಕನ್ನಡದ ಒಂದು ಹಳೆಯ ಗಾದೆಮಾತು. ಇದರ ನೇರ ಮತ್ತು ಆಂತರಿಕ ಅರ್ಥಗಳು ಹೀಗಿವೆ.

ಅರಗು ತಿಂದು ಕರಗುವ ದೈವ ಶಾಖಕ್ಕೆ ಕರಗಿಹೋಗುವ ವಸ್ತುವಿನಿಂದ ಮಾಡಿದ ಮೂರ್ತಿಯನ್ನು ನೈಜ ದೇವರೆಂದು ಹೇಗೆ ನಂಬುವುದು? ಉರಿಯ ಕಂಡರೆ ಮುರುಟುವ ದೈವ ಬೆಂಕಿಯ ಉಷ್ಣಕ್ಕೆ ಸಂಕುಚಿತಗೊಳ್ಳುವ ಅಸ್ಥಿರ ವಸ್ತುಗಳ ದೈವ.

ಅವಸರ ಬಂದರೆ ಮಾರುವ ದೈವ ಕಷ್ಟಕಾಲದಲ್ಲಿ ಹಣಕ್ಕಾಗಿ ಮಾರಿಕೊಳ್ಳುವಂತಹ ದೈವಗಳು ನಿಜವಾದ ದೇವರಾಗಲಾರವು. ಅಂಜಿಕೆಯಾದರೆ

ಹೂಳುವ ದೈವ ಭಯಬಂದಾಗ ಮಣ್ಣಿನಲ್ಲಿ ಹೂತುಹಾಕುವ ವಸ್ತುಗಳನ್ನು ದೈವವೆಂದು ಹೇಗೆ ಒಪ್ಪುವುದು?

ಅಂತಿಮ ಸಂದೇಶ ಬಾಹ್ಯ ಮೂರ್ತಿಗಳಿಗಿಂತ, ಚೈತನ್ಯರೂಪಿಯಾದ ಕೂಡಲಸಂಗಮದೇವನೊಬ್ಬನೇ ನಿಜವಾದ ಸಹಜ ದೇವರು ಎಂಬ ತತ್ವವನ್ನು ಇದು ಸಾರುತ್ತದೆ. ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಬರ ಪರಿಸ್ಥಿತಿ ಕುರಿತು ಪರಿಷತ್‌ನಲ್ಲಿ ಕಾಂಗ್ರೆಸ್-ಬಿಜೆಪಿ ಸದಸ್ಯರ ವಾಕ್ಸಮರ

ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ರಾಜ್ಯದಲ್ಲಿ ತೀವ್ರಗೊಂಡಿರುವ ಬರ ಪರಿಸ್ಥಿತಿ ಕುರಿತು ವಿಧಾನ ಪರಿಷತ್ನಲ್ಲಿ ನಡೆಯುತ್ತಿರುವ ವಿಶೇಷ ಚರ್ಚೆ ಇಂದು ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವಿನ ತೀವ್ರ ವಾಗ್ವಾದಕ್ಕೆ ಸಾಕ್ಷಿಯಾಯಿತು. ರೈತರ ಸಮಸ್ಯೆ, ಬರ ತಾಲ್ಲೂಕುಗಳ ಘೋಷಣೆ ಹಾಗೂ ಕೇಂದ್ರದ ನೆರವು ವಿಚಾರ ಮುಂದಿಟ್ಟುಕೊಂಡು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬರ ಚರ್ಚೆ ಆರಂಭಿಸಿದ ಛಲವಾದಿ ನಾರಾಯಣಸ್ವಾಮಿ, ರೈತರ ಕಣ್ಣೀರು ಒರೆಸುತ್ತೇವೆ, ರೈತರು ನಮ ಬೆನ್ನೆಲುಬು ಎಂದು ಭಾಷಣ ಮಾಡಿದರೆ ಮಾತ್ರ ಸಾಲದು ಎಂದು ಸರ್ಕಾರವನ್ನು ಪ್ರಶ್ನಿಸಿದ ಅವರು, ಘೋಷಣೆ ಮಾಡಿ ರೈತರನ್ನು ಶೋಷಣೆ ಮಾಡುವಂತಾಗಬಾರದು ಎಂದು ಟೀಕಿಸಿದ ಅವರು, ಕೇಂದ್ರ ಸರ್ಕಾರದ ನಿಯಮಾವಳಿಗಳ ಅನ್ವಯ ಒಂದೇ ಬಾರಿಗೆ ಬರ ತಾಲ್ಲೂಕುಗಳನ್ನು ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು. ಯಾವುದೋ ಕ್ರೀಡಾಕೂಟದಲ್ಲಿ ಗೆದ್ದು ಅರ್ಹತೆ ಪಡೆದವರಿಗೆ ಪದಕ ನೀಡಿದಂತೆ, ಒಮೊಮೆ ಒಂದೊಂದು ತಾಲ್ಲೂಕನ್ನು ಆಯ್ಕೆ ಮಾಡಿ ಬರ ತಾಲ್ಲೂಕುಗಳ ಪಟ್ಟಿಗೆ ಸೇರ್ಪಡೆ ಮಾಡುವುದು ಸರಿಯೇ? ಎಂದು ಪ್ರಶ್ನಿಸಿದ ಅವರು, ಬರ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ದೆಹಲಿಗೆ ಹೋಗುವುದೇಕೆ? : ರಾಜ್ಯ ಸರ್ಕಾರದ ನಾಯಕರು ಪಕ್ಷ ಹಾಗೂ ನಾಯಕತ್ವದ ವಿಚಾರಗಳಿಗೆ ಪದೇಪದೇ ದೆಹಲಿಗೆ ತೆರಳುತ್ತಾರೆ ಎಂದು ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು. ಜನರ ಸಮಸ್ಯೆಗಳನ್ನು ಹೊತ್ತು ಇದೇ ರೀತಿ ದೆಹಲಿಗೆ ಎಂದಾದರೂ ಹೋಗಿದ್ದೀರಾ? ಎಂದು ಪ್ರಶ್ನಿಸಿದ ಅವರು, ಪ್ರತಿಯೊಂದು ಸಮಸ್ಯೆಗೂ ಕೇಂದ್ರ ಸರ್ಕಾರವನ್ನು ದೂರಿ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸರಿಯಲ್ಲ ಎಂದು ಆಕ್ಷೇಪಿಸಿದರು. ಬರ, ಎಲ್‌ನಿನೋ ಸೇರಿದಂತೆ ಹವಾಮಾನ ಮುನ್ಸೂಚನೆಗಳು ಮೊದಲೇ ಲಭ್ಯವಿದ್ದರೂ ಸರ್ಕಾರ ಸೂಕ್ತ ಮುನ್ನೆಚ್ಚರಿಕೆ ಕೈಗೊಂಡಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು, ಇದೀಗ ಪರಿಸ್ಥಿತಿ ಉಲ್ಬಣಗೊಂಡಿರುವ ಸಂದರ್ಭದಲ್ಲಿ ಬರ ನಿರ್ವಹಣೆ ಹಾಗೂ ಪರಿಹಾರ ಕಾರ್ಯಗಳ ಮೇಲ್ವಿಚಾರಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದರು.

ಕೇವಲ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಹಣ ನೀಡಿದರೆ ರೈತರ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಹೇಳಿದರು. ಬರ ಚರ್ಚೆ ವೇಳೆ ಕೇಂದ್ರದ ರೈತಪರ ಯೋಜನೆಗಳು ಹಾಗೂ ಸಾಲಮನ್ನಾ ವಿಚಾರವೂ ಪ್ರಸ್ತಾಪವಾಯಿತು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ 71 ಸಾವಿರ ಕೋಟಿ ಸಾಲಮನ್ನಾ ಮಾಡಲಾಗಿತ್ತು ಎಂದು ಕಾಂಗ್ರೆಸ್ ಸದಸ್ಯರು ಉಲ್ಲೇಖಿಸಿದರೆ, ಬಿಜೆಪಿ ಸದಸ್ಯರು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತರ ಖಾತೆಗಳಿಗೆ 14.40 ಲಕ್ಷ ಕೋಟಿ ಹಣ ವರ್ಗಾವಣೆ ಮಾಡಿದೆ ಎಂದು ಪ್ರತಿಪಾದಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ಅಜಿರೈತರ ಖಾತೆಗೆ 14 ಲಕ್ಷ ಕೋಟಿ ಹಾಕಿದ್ದರೆ ದೆಹಲಿ ಗಡಿಯಲ್ಲಿ ರೈತರು ಏಕೆ ಪ್ರತಿಭಟನೆ ನಡೆಸುತ್ತಿದ್ದರು? ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ಟೀಕೆ ಮಾಡುತ್ತಾ, ದೆಹಲಿ ರೈತ ಪ್ರತಿಭಟನೆ ವೇಳೆ ನೂರಾರು ರೈತರು ಮೃತಪಟ್ಟ ವಿಚಾರ ಪ್ರಸ್ತಾಪಿಸಿದರು. ಅವರ ಹೇಳಿಕೆಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಹರಿಪ್ರಸಾದ್ ಅವರು ಏಕವಚನ ಬಳಸಿದ್ದಾರೆ ಎಂದು ಬಿಜೆಪಿ ಸದಸ್ಯರು ಆಕ್ಷೇಪಿಸಿದ ಹಿನ್ನೆಲೆಯಲ್ಲಿ ಸದನದಲ್ಲಿ ಗದ್ದಲ ಹೆಚ್ಚಾಯಿತು. ಬಿಜೆಪಿ ಸದಸ್ಯ ಸಿ.ಟಿ. ರವಿ, ಹರಿಪ್ರಸಾದ್ ಅವರ ಮಾತಿನ ಶೈಲಿಯನ್ನು ಆಕ್ಷೇಪಿಸಿ ಆಚಾರವಿಲ್ಲ ನಾಲಿಗೆ ಎಂದು ತಿರುಗೇಟು ನೀಡಿದರು. ಇದರಿಂದ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಮಾತಿನ ಚಕಮಕಿ ಮತ್ತಷ್ಟು ತೀವ್ರಗೊಂಡಿತು. ಇದೇನು ಫಿಶ್ ಮಾರ್ಕೆಟ್ಟಾ? ಎಂದ ಸಭಾಪತಿ : ಸದನದಲ್ಲಿ ಗದ್ದಲ ಹೆಚ್ಚಾಗುತ್ತಿದ್ದಂತೆ ಸಭಾಪತಿ ಸಲೀಂ ಅಹದ್ ಅವರು ಪೀಠದಿಂದ ಎದ್ದು ನಿಂತು ಸದಸ್ಯರನ್ನು ಶಾಂತಗೊಳಿಸಲು ಮುಂದಾದರು.

ಸದಸ್ಯರ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಇದೇನು ಫಿಶ್ ಮಾರ್ಕೆಟ್ಟಾ ?ಎಂದು ಪ್ರಶ್ನಿಸಿದರು. ಇದಕ್ಕೆ ಬಿಜೆಪಿ ಸದಸ್ಯ ಕೇಶವ ಪ್ರಸಾದ್ ತಿರುಗೇಟು ನೀಡಿ, ಫಿಶ್ ಮಾರ್ಕೆಟ್ ವ್ಯವಸ್ಥೆ ಮಾಡಿದ್ದು ನೀವೇ ಎಂದು ಆಕ್ಷೇಪಿಸಿದರು. ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದರಿಂದಲೇ ಇಂತಹ ಪರಿಸ್ಥಿತಿ ಉಂಟಾಗಿದೆ ಎಂದು ಅವರು ಸಭಾಪತಿಯನ್ನು ಪ್ರಶ್ನಿಸಿದರು.

ಗದ್ದಲ ನಿಯಂತ್ರಿಸಲು ಮತ್ತೊಮೆ ಮನವಿ ಮಾಡಿದ ಸಭಾಪತಿ ಸಲೀಂ ಅಹದ್, ಜನ ನಮನ್ನು ನೋಡುತ್ತಿದ್ದಾರೆ. ಗೌರವದಿಂದ ವಿಚಾರ ಚರ್ಚೆ ಮಾಡಿ. ಒಬ್ಬರಿಗೊಬ್ಬರು ಅಗೌರವ ತರುವಂತೆ ನಡೆದುಕೊಳ್ಳಬೇಡಿ ಎಂದು ಸದಸ್ಯರಿಗೆ ಸೂಚಿಸಿದರು.ಬಳಿಕ ಸದಸ್ಯರು ತಮ ಸ್ಥಾನಗಳಲ್ಲಿ ಕುಳಿತುಕೊಂಡಿದ್ದು, ಸದನದ ಕಲಾಪ ಮತ್ತೆ ಸಹಜ ಸ್ಥಿತಿಗೆ ಮರಳಿತು. ನಂತರ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಮ ಬರ ಚರ್ಚೆಯನ್ನು ಮುಂದುವರಿಸಿದರು.

ವಿಶೇಷ ಅಧಿವೇಶನ ಒಂದು ದಿನ ವಿಸ್ತರಿಸುವ ಸಾಧ್ಯತೆ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಬರಹಾಗೂ ಕಸ್ತೂರಿರಂಗನ್ ವರದಿಯ ಕುರಿತು ಚರ್ಚೆ ನಡೆಸಲಾಗುತ್ತಿರುವ ವಿಶೇಷ ಅಧಿವೇಶನವನ್ನು ಮತ್ತೆ ಒಂದು ದಿನ ವಿಸ್ತರಿಸುವ ಸಾಧ್ಯತೆ ಇದೆ. ನಿನ್ನೆಯಿಂದ ಆರಂಭವಾಗಿರುವ ಅಧಿವೇಶನದಲ್ಲಿ ಇಡೀ ದಿನ ಕಸ್ತೂರಿರಂಗನ್ ವರದಿಯ ಕುರಿತು ಚರ್ಚೆಗಳಾಗಿವೆ.



ಇಂದು ಮಧ್ಯಾಹ್ನದವರೆಗೂ ಚರ್ಚೆಗಳು ಮುಂದುವರೆದಿವೆ. ಬರ ಪರಿಸ್ಥಿತಿಯ ಕುರಿತು ಪ್ರಮುಖವಾಗಿ ಚರ್ಚಿಸಲು ಕರೆಯಲಾಗಿದ್ದ ಅಧಿವೇಶನದಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಸಮಯವನ್ನು ಕಸ್ತೂರಿರಂಗನ್ ವರದಿ ಕಬಳಿಸಿದೆ. ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು ನೀಡಿರುವ ಮಾಹಿತಿಯ ಪ್ರಕಾರ ಬಿಜೆಪಿ ಮತ್ತು ಜೆಡಿಎಸ್‌ನ ವಿರೋಧ ಪಕ್ಷಗಳ ಸದಸ್ಯರು 3 ಗಂಟೆ ಆಡಳಿತ ಪಕ್ಷ ಕಾಂಗ್ರೆಸ್ಸಿನ ಸದಸ್ಯರು 2 ಗಂಟೆ ಚರ್ಚೆ ಮಾಡಿದ್ದಾರೆ. ಇಂದು ಮಧ್ಯಾಹ್ನದ ವರೆಗೂ ಚರ್ಚೆ ಮುಂದುವರೆದು ಮುಖ್ಯಮಂತ್ರಿಯವರು ಉತ್ತರ ನೀಡಲಿದ್ದಾರೆ. ಒಂದೂವರೆ ದಿನದಲ್ಲಿ ಬಹುತೇಕ ಸಮಯ ಪೂರ್ಣಗೊಂಡಿತ್ತು.

ರಾಜ್ಯ ಸರ್ಕಾರ ಮೊದಲ ಹಂತದಲ್ಲಿ 101 ಎರಡನೇ ಹಂತದಲ್ಲಿ 23 ತಾಲ್ಲೂಕುಗಳನ್ನು ಸೇರಿಸಿ ಒಟ್ಟು 154 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಿದೆ. ಇನ್ನೂ ಐವತ್ತು ತಾಲ್ಲೂಕುಗಳು ಬರಪೀಡಿತ ಗುಣಲಕ್ಷಣಗಳನ್ನು ಹೊಂದಿವೆ, ಇವುಗಳ ಘೋಷಣೆ ಹಾಗೂ ಪುನರ್ವಸತಿಯ ಬಗ್ಗೆ ಸುದೀರ್ಘ ಚರ್ಚೆಯಾಗಬೇಕಿದೆ. ಎಲ್ಲಾ ಶಾಸಕರು ತಮ ಕ್ಷೇತ್ರ ಬರಪೀಡಿತ ತಾಲ್ಲೂಕಿನ ವ್ಯಾಪ್ತಿಗೆ ಒಳಪಡಬೇಕು ಎಂಬ ಒತ್ತಡ ಹೇರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿಧಾನಸಭೆಯಲ್ಲಿ ವ್ಯಾಪಕ ಚರ್ಚೆಯಾಗುವ ಸಾಧ್ಯತೆ ಇದೆ. ಬಾಕಿ ಇರುವ ಒಂದೂವರೆ ದಿನ ಸಮಯ ಸಾಲುವುದಿಲ್ಲ ಎಂಬ ಕಾರಣಕ್ಕಾಗಿ ವಿಧಾನಮಂಡಳದ ಅಧಿವೇಶನವನ್ನು ಗುರುವಾರದವರೆಗೂ ವಿಸ್ತರಿಸುವ ಚರ್ಚೆಗಳಾಗಿವೆ. ವಿರೋಧ ಪಕ್ಷಗಳು ಒಂದು ವಾರದ ಕಾಲ ಕಲಾಪವನ್ನು ವಿಸ್ತರಿಸುವಂತೆ ಒತ್ತಾಯಿಸಿವೆ. ಆದರೆ ಕಸ್ತೂರಿರಂಗನ ವರದಿ ಚರ್ಚೆಯ ಬಳಿಕ ಬರ ಪೀಡಿತ ಪ್ರದೇಶಗಳ ಸಮಸ್ಯೆ ಹಾಗೂ ಪುನರ್ ವಸತಿಗಷ್ಟೇ ಚರ್ಚೆಗಳು ಸೀಮಿತವಾದರೆ ಕಲಾಪದ ಅವಧಿ ವಿಸ್ತರಣೆಯಾಗಲಿದೆ.

ಗೃಹಲಕ್ಷ್ಮಿ ಇಕೆವೈಸಿ ಯಾವುದೇ ದಾಖಲೆ ಕೊಡಬೇಕಿಲ್ಲ ನಾಗರಾಜು

ನೈಜ್ಯ ದೆಸೆ ನ್ಯೂಸ್



ತಾಂಡವಪುರ: ರಾಜ್ಯದಲ್ಲಿ: ಗೃಹಲಕ್ಷ್ಮಿ ಯೋಜನೆ ಮರುಪರಿಶೀಲನೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಅಥವಾ ಮರು ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಯಾವುದೇ ದಾಖಲೆಗಳಿಲ್ಲದೆ ಗೃಹಲಕ್ಷ್ಮಿ ಇಕೆವೈಸಿ ನಡೆಯಲಿದೆ. ಅಧಿಕಾರಿ ನಾಗರಾಜುರವರು ತಿಳಿಸಿದರು ತಮ್ಮ ಜಿಲ್ಲಾ ಪಂಚಾಯತ್ ಡಿ.ದೇವರಾಜ್ ಅರಸು ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗೃಹಲಕ್ಷ್ಮಿ ಮರುಪರಿಶೀಲನಾ ಅರ್ಜಿಯ ಗೊಂದಲಕ್ಕೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜು ಮಾತನಾಡಿ ಗೃಹ ಲಕ್ಷಿ ಯೋಜನೆ ಮರುಪರಿಶೀಲನೆಗೆ 250 ಫಲಾನುಭವಿಗೆ ಒಬ್ಬರು ಗಣತಿದಾರರನ್ನು ನೇಮಕ ಮಾಡಲಾಗುವುದು.

ಫಲಾನುವಿಗಳು ಇ.ಕೆ.ವೈ.ಸಿ ಮಾಡಿಸಿರಬೇಕು. ಬ್ಯಾಂಕ್ ಖಾತೆಯನ್ನು ಕರ್ನಾಟಕ ರಾಜ್ಯದಲ್ಲಿ ಹೊಂದಿರಬೇಕು ಸೇರಿ ಸರ್ಕಾರ ತಿಳಿಸಿರುವ ಇನ್ನಿತರೆ ಮಾಹಿತಿಯನ್ನು ಸಭೆಗೆ ನೀಡಿದರು. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಎಸ್.ಅರುಣ್ ಕುಮಾರ್ ಕೆ.ಆರ್.ನಗರ ತಾಲ್ಲೂಕಿನಲ್ಲಿ ಬಸ್ ಸಮಸ್ಯೆಗಳು ಪ್ರತಿ ಬಾರಿ ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಅದನ್ನು ಸರಿಪಡಿಸುವಂತೆ ಕೆಎಸ್‌ಆರ್‌ಟಿಸಿ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಯಲ್ಲಿ ಮರಣ ಹೊಂದಿರುವ 15,724 ಗೃಹ ಲಕ್ಷ್ಮಿ ಫಲಾನುಭವಿಗಳಿಗೆ ಯೋಜನೆ ರದ್ದು ಪಡಿಸಿ, ಈಗಾಗಲೇ ಮರಣ ಹೊಂದಿ ಅವರ ಖಾತೆಗೆ ಜಮೆಯಾಗಿರುವ 79,86,760 ರೂ ಹಣವನ್ನು ಹಿಂಪಡೆದು ಸರ್ಕಾರಕ್ಕೆ ಜಮೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲಾ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಮಾತನಾಡಿ, ಮುಖ್ಯಮಂತ್ರಿಗಳ ಭೂ ಗ್ಯಾರಂಟಿ, ನೇಗಿಲಯೋಗಿ, ತೇಗದ ಸಿರಿ ಯೋಜನೆ ಸೇರಿ ವಿವಿಧ ಯೋಜನೆ ಜಾರಿಗೆ ತಂದಿದ್ದು, ಅಧಿಕಾರಿಗಳು ಪಂಚ ಗ್ಯಾರಂಟಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ರೀತಿ ಸರ್ಕಾರ ಜಾರಿಗೆ ತರುವ ಎಲ್ಲಾ ಯೋಜನೆಯನ್ನು ಸಾರ್ವಜನಿಕರಿಗೆ ತಲುಪಿಸಲು ಶ್ರಮಿಸಬೇಕು ಎಂದರು. ಜಿಲ್ಲಾ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಹುಣಸೂರು ಬಸವಣ್ಣ ಮಾತನಾಡಿ ಗೃಹ ಲಕ್ಷ್ಮಿ ಯೋಜನೆಯ ಮರುಪರಿಶೀಲನೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಅಥವಾ ಗಣತಿದಾರರಿಗೆ ತರಬೇತಿ ನೀಡಲಾಗುತ್ತಿದೆ. ಮರುಪರಿಶೀಲನೆ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿ ಅಗತ್ಯ ದಾಖಲಾತಿಗಳನ್ನು ಒದಗಿಸುವಂತೆ ಮನವರಿಕೆ ಮಾಡಿಕೊಡಿ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಸಾ.ಮಾ.ಯೋಗೇಶ್ ಮಾತನಾಡಿ, ಕೆ.ಆರ್.ನಗರದಲ್ಲಿ ಕಾರ್ಯಕ್ರಮವೊಂದಕ್ಕೆ ಗ್ಯಾರಂಟಿ ಅನುಷ್ಠಾನ ಸಮಿತಿಗೆ ಆಹ್ವಾನ ನೀಡಿಲ್ಲ. ಇದನ್ನು ಪ್ರಶ್ನಿಸಿದ ಸಮಿತಿ ಸದಸ್ಯನಿಗೆ ನಿಮ್ಮನ್ನು ಆಹ್ವಾನಿಸುವ ಶಿಷ್ಟಾಚಾರ ಇಲ್ಲವೆಂದು ಹಾರಿಕೆ ಉತ್ತರ ನೀಡಿದ್ದಾರೆಂದರು. ಮಾತ್ರವಲ್ಲದೆ, ತಮ್ಮನ್ನು ಕರೆಯದಿರುವ ಬಗ್ಗೆ ವಿವರಣೆ ಕೋರಿ ಸಮಿತಿ ಸದಸ್ಯರು ಪತ್ರ ಬರೆದಿದ್ದರೂ ಉತ್ತರ ನೀಡಿಲ್ಲವೆಂದು ದೂರಿದರು. ಇದಕ್ಕೆ ಶೀಘ್ರ ಕ್ರಮವಹಿಸಬೇಕೆಂದು ಸಮಿತಿ ಸದಸ್ಯರು ಆಗ್ರಹಿಸಿ ದನಿಗೂಡಿಸಿದರು. ಅಂತಿಮವಾಗಿ ಜಿಲ್ಲಾ ಮುಖ್ಯ ಯೋಜನಾಧಿಕಾರಿ ಸವಿತಾ ಮಾತನಾಡಿ, ಈ ಸಂಬಂಧ ಕೂಡಲೇ ಇದಕ್ಕೆ ಉತ್ತರ ನೀಡಿ ಅಧಿಕಾರಿಗೆ ಶೋಕಾಸ್ ನೋಟೀಸ್ ನೀಡಲಾಗುವುದು.

ಅಧಿಕಾರಿಗಳು ಸರ್ಕಾರದ ಎಲ್ಲಾ ಕಾರ್ಯಕ್ರಮಗಳಿಗೂ ಶಿಷ್ಟಾಚಾರದ ಪ್ರಕಾರ ಗ್ಯಾರಂಟಿ ಸಮಿತಿ ಸದಸ್ಯರನ್ನು ಆಯಾ ಅಧಿಕಾರಿಗಳು ಕರೆಬೇಕೆಂದು ತಿಳಿಸಿದರು. ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಸಾ.ಮಾ.ಯೋಗೇಶ್ ಮಾತನಾಡಿ, ತೂಕ ಮಾಪನ ಇಲಾಖೆ ಅಧಿಕಾರಿಗಳು ವರ್ಷಕ್ಕೊಮ್ಮೆ ಮಾಪನ ನವೀಕರಣ ಮಾಡಿ ಸುಮ್ಮನಾದರೆ ಸಾಲದು ಮತ್ತೆ ಅದನ್ನು ಪುನರ್ ಪರಿಶೀಲಿಸುವ ಕೆಲಸ ಮಾಡಬೇಕಿದೆ. ಕೆಲವರು ನವೀಕರಣದ ಬಳಿಕ ಅದನ್ನು ದುರುಪಯೋಗಪಡಿಸಿಕೊಳ್ಳುವ ಕೆಲಸ ಹೆಚ್ಚಾಗಿ ಗ್ರಾಮಾಂತರ ಭಾಗದಲ್ಲಿ ಆಗುತ್ತಿದ್ದು, ಇದನ್ನು ಸರಿಪಡಿಸಬೇಕೆಂದು ಹೇಳಿದರು. ಜಿಲ್ಲಾ ಮುಖ್ಯ ಯೋಜನಾಧಿಕಾರಿ ಸವಿತಾ ಮಾತನಾಡಿ ಪಂಚ ಗ್ಯಾರಂಟಿ ಯೋಜನೆಗಳು ಹೆಚ್ಚು ಜನರಿಗೆ ತಲುಪಿಸಲು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳು ಫಲಾನುಭವಿಗಳ ಯಶೋಗಾಥೆಯನ್ನು ಗ್ಯಾರಂಟಿ ಯೋಜನೆಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ತಲುಪಿಸುವಂತೆ ತಿಳಿಸಿದರು. ಸಭೆಯಲ್ಲಿ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಹುಣಸೂರು ಬಸವಣ್ಣ ಅಬ್ದುಲ್ ಖಾದರ್, ಚಲುವರಾಜು, ಚಾಮರಾಜು, ಲಲಿತಾ, ಉತ್ತನಳ್ಳಿ ಶಿವಣ್ಣ ಸೇರಿ ದಂತೆ ಇಲಾಖೆಯ ಅಧಿಕಾರಿಗಳು ಗ್ಯಾರಂಟಿ ಯೋಜನೆ ಸಮಿತಿ ಸದಸ್ಯರುಗಳು ಸಭೆಯಲ್ಲಿ ಹಾಜರಿದ್ದರು

ಪಡಿತರ ಸಮಸ್ಯೆ ಇತ್ಯರ್ಥಕ್ಕೆ ಹೊಸ ಮಾನದಂಡ

ನಗರದಲ್ಲಿ ಪಡಿತರ ಪಡೆಯಲು ಹಾಗೂ ಪಡಿತರ ಇಕೆವೈಸಿಗೆ ಸಂಬಂಧಿಸಿದಂತೆ ಆಗುತ್ತಿರುವ ಸಮಸ್ಯೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಯಾವೆಲ್ಲಾ ಕ್ರಮವಹಿಸಿದ್ದೀರಿ ಎಂದು ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಅರುಣ್ ಕುಮಾರ್ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಆಹಾರ ಇಲಾಖೆ ಅಧಿಕಾರಿ ಸರ್ವರ್ ಸಮಸ್ಯೆ ಹೆಚ್ಚಾಗಿದ್ದು, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗೆ ಸೀಮಿತವಾಗಿ ಪ್ರತ್ಯೇಕ ಸರ್ವರ್ ಮಾಡುವಂತೆ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಅಲ್ಲದೆ, ಪಡಿತರ ವಿತರಣೆ ಸಮಯವನ್ನು ಬದಲಿಸಲಾಗಿದ್ದು, ನಿಗಧಿತ ಸಮಯದಲ್ಲಿ ಪಡಿತರ ವಿತರಿಸಬೇಕಿದೆ. ಅಲ್ಲದೆ, ಇಕೆವೈಸಿಗೆ ಸಂಬಂಧಿಸಿದಂತೆ ಹೊಸ ತಂತ್ರಜ್ಞಾನ ಜಾರಿಗೊಳಿಸುವ ನಿಟ್ಟಿನಲ್ಲಿ ಚಿಂತನೆ ನಡೆಯುತ್ತಿದ್ದು, ಅದು ಜಾರಿಗೊಂಡರೆ ಸಮಸ್ಯೆ ಇತ್ಯರ್ಥವಾಗಲಿದೆ ಎಂದರು.

ಮಾಳಿಂಗರಾಯ ಫೈನಾನ್ಸ್‌ನಿಂದ ಕೋಟ್ಯಂತರ ರೂ. ವಂಚನೆ ಆರೋಪ: ಸೂಕ್ತ ಕಾನೂನು ಕ್ರಮಕ್ಕೆ ದಲಿತ ಸಂಘರ್ಷ ಸಮಿತಿ ಆಗ್ರಹ

ನೈಜ್ಯ ದೆಸೆ ನ್ಯೂಸ್



ರಾಯಚೂರು: ಹಣವನ್ನು ದ್ವಿಗುಣಗೊಳಿಸುವುದಾಗಿ ಹಾಗೂ ಸಾಲ ನೀಡುವುದಾಗಿ ನಂಬಿಸಿ ಸಾರ್ವಜನಿಕರಿಂದ ಕೋಟ್ಯಂತರ ರೂಪಾಯಿ ಹಣ ಸಂಗ್ರಹಿಸಿ ವಂಚನೆ ಮಾಡಲಾಗಿದೆ ಎಂದು ಆರೋಪಿಸಿ, ‘ಮಾಳಿಂಗರಾಯ ಫೈನಾನ್ಸ್’ ಮಾಲೀಕ ಹಾಗೂ ನಿರ್ದೇಶಕ ಮಾಳಪ್ಪ ಅಲಿಯಾಸ್ ಮಾಳಿಂಗರಾಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು, ವಂಚನೆಗೊಳಗಾದ ಸದಸ್ಯರ ಹಣವನ್ನು ವಾಪಸ್ ಕೊಡಿಸಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾ ಸಾಹೇಬ್ ಡಾ. ಎನ್. ಮೂರ್ತಿ ಸ್ಥಾಪಿತ) ಜಿಲ್ಲಾ ಸಮಿತಿ ಆಗ್ರಹಿಸಿದೆ.

ಈ ಕುರಿತು ಸಂಘಟನೆಯ ಪದಾಧಿಕಾರಿಗಳು ರಾಯಚೂರು ತಾಲೂಕು ತಹಸೀಲ್ದಾರ್ ಅವರ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

20 ಸಾವಿರಕ್ಕೂ ಹೆಚ್ಚು ಸದಸ್ಯರಿಂದ ಹಣ ಸಂಗ್ರಹ ಆರೋಪ

ಮನವಿಯಲ್ಲಿ ತಿಳಿಸಿರುವಂತೆ, ಸುರಪುರ ಮೂಲದ ಮಾಳಪ್ಪ ಅವರು ಸುರಪುರದಲ್ಲಿ ಮುಖ್ಯ ಕಚೇರಿ ಸ್ಥಾಪಿಸಿ, ಕಳೆದ ಸುಮಾರು ಮೂರು ವರ್ಷಗಳಿಂದ ರಾಯಚೂರು ಜಿಲ್ಲೆಯ ಲಿಂಗಸುಗೂರು, ಹಟ್ಟಿ, ಜಾಲಹಳ್ಳಿ, ದೇವದುರ್ಗ ತಾಲೂಕಿನ ಅರಕೇರ, ಮಾನ್ವಿ ಸೇರಿದಂತೆ ವಿವಿಧೆಡೆ ಹಾಗೂ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ, ಬಾಗಲಕೋಟೆ ಜಿಲ್ಲೆಯ ಇಲಕಲ್ ಮತ್ತು ಬಳ್ಳಾರಿ ಜಿಲ್ಲೆಯ ಶಿರಗುಪ್ಪ ವ್ಯಾಪ್ತಿಯಲ್ಲಿ ಉಪಶಾಖೆಗಳನ್ನು ತೆರೆದು ಹಣಕಾಸು ವ್ಯವಹಾರ ನಡೆಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಹಣವನ್ನು ದ್ವಿಗುಣಗೊಳಿಸುವುದಾಗಿ, ‘ಚೈನ್ ಸಿಸ್ಟಮ್’ ಮೂಲಕ ಲಾಭ ನೀಡುವುದಾಗಿ ಹಾಗೂ ಸಾಲ ನೀಡುವುದಾಗಿ ಆಮಿಷವೊಡ್ಡಿ ಸುಮಾರು 20,000ಕ್ಕೂ ಹೆಚ್ಚು ಸದಸ್ಯರಿಂದ ಕೋಟ್ಯಂತರ ರೂಪಾಯಿ ಹಣವನ್ನು ಸಂಗ್ರಹಿಸಲಾಗಿದೆ ಎಂದು ಸಮಿತಿ ಆರೋಪಿಸಿದೆ.

ಆರು ತಿಂಗಳಿಂದ ಸದಸ್ಯರಿಗೆ ಹಣ ಪಾವತಿಸಿಲ್ಲ ಎಂಬ ಆರೋಪ

ಕಳೆದ ಆರು ತಿಂಗಳಿಂದ ಸದಸ್ಯರಿಗೆ ಹಣ ನೀಡದೆ, ಅವರ ಕರೆಗಳಿಗೆ ಸಮರ್ಪಕವಾಗಿ ಸ್ಪಂದಿಸದೆ, ಬೆಂಗಳೂರು, ಹೈದರಾಬಾದ್, ದೆಹಲಿ ಹಾಗೂ ಮಹಾರಾಷ್ಟ್ರಗಳಲ್ಲಿ ಸಭೆಗಳಿವೆ ಎಂದು ಹೇಳಿ ಕಾಲಹರಣ ಮಾಡಲಾಗುತ್ತಿತ್ತು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಇದರಿಂದ ಆತಂಕಗೊಂಡ ಸದಸ್ಯರು ಸುರಪುರದಲ್ಲಿರುವ ಮುಖ್ಯ ಕಚೇರಿಗೆ ತೆರಳಿ ವಿಚಾರಿಸಿದಾಗ, ಕಚೇರಿ ಹಲವು ದಿನಗಳಿಂದ ಮುಚ್ಚಿರುವುದು ಕಂಡುಬಂದಿದೆ ಎಂದು ಸಮಿತಿ ಆರೋಪಿಸಿದೆ.

ಕೂಲಿ ಕಾರ್ಮಿಕರ ಹಣವೂ ಹೂಡಿಕೆಯಾಗಿರುವ ಆರೋಪ

ಫೈನಾನ್ಸ್‌ನಲ್ಲಿ ಹಣ ಹೂಡಿಕೆ ಮಾಡಿದವರಲ್ಲಿ ಹೆಚ್ಚಿನವರು ಕೂಲಿ-ನಾಲಿ ಮಾಡಿ ಉಳಿತಾಯ ಮಾಡಿದವರು, ಸಾಲ ಪಡೆದು ಹಣ ಹೂಡಿಕೆ ಮಾಡಿದವರು ಹಾಗೂ ಚಿನ್ನಾಭರಣಗಳನ್ನು ಅಡಮಾನವಿಟ್ಟು ಹಣ ಹೂಡಿಕೆ ಮಾಡಿದ ಬಡವರು ಇದ್ದಾರೆ ಎಂದು ಸಮಿತಿ ತಿಳಿಸಿದೆ. ಹೀಗಾಗಿ ಪ್ರಕರಣವನ್ನು ಸಮಗ್ರವಾಗಿ ತನಿಖೆ ನಡೆಸಿ, ಆರೋಪಿತ ಮಾಳಪ್ಪನ ವಿರುದ್ಧ ಕಾನೂನು ಕ್ರಮ ಕೈಗೊಂಡು, ವಂಚನೆಗೊಳಗಾದ ಸದಸ್ಯರ ಹಣವನ್ನು ಪತ್ತೆಹಚ್ಚಿ ವಾಪಸ್ ಕೊಡಿಸಲು ಸರ್ಕಾರ ಹಾಗೂ ಪೊಲೀಸ್ ಇಲಾಖೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ದಲಿತ ಸಂಘರ್ಷ ಸಮಿತಿ ಒತ್ತಾಯಿಸಿದೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಅಶೋಕ ನಂಜಲದಿನ್ನಿ, ಜಿಲ್ಲಾ ಉಪಾಧ್ಯಕ್ಷ ಬಸವರಾಜ ನಾಡಂಗಿ, ಸಂಘಟನಾ ಕಾರ್ಯದರ್ಶಿ ಯೇಸು ಬಿಜನಗೇರಿ, ಜಿಲ್ಲಾ ಕಾರ್ಯದರ್ಶಿಗಳಾದ ಜೈರಾಜ್ ಟೈಗರ್, ಬಶೀರ್ ಅಹಮದ್, ತಾಲೂಕು ಅಧ್ಯಕ್ಷ ರಾಜು ಬೊಮನಾಳ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಸಂಘಟನೆಯ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101